Accredited by NAAC with "A" Grade
Prasaranga
Kuvempu University
Shankaraghatta, Shivamogga

ISSN 2583-0708

KUVEMPU UNIVERSITY

# THE SOCIAL SCIENCE DIALOGUE

Peer Reviewed Open Access e-Journal

Search for New Paradigms in the Humanities and Social Sciences
Rajendra Chenni

The Modern Educational Modalities for Contemporary Teaching and Learning
Dange, J K. Usha R G.

Economic empowerment of businesswomen in fragile and conflict affected states: a case study of Yemen
Ruba Mohammed Qasim Alareki, Adeeba Zulail, Kholoud Shaker, Adnan Abdulrahman Naef Farhan.

ಸಾಮಾನ್ಯಜ್ಞಾನ ಪ್ರಸರಣೆಯಲ್ಲಿ ಶೈಕ್ಷಣಿಕ ಸಾಧನವಾಗಿ ಕನ್ನಡ ದಿನಪತ್ರಿಕೆಗಳ ಪಾತ್ರ: ಒಂದು ಪ್ರಾಯೋಗಿಕ ಅಧ್ಯಯನ
ಡಾ. ಸತ್ಯಪ್ರಕಾಶ್ ಎಂ ಆರ್. & ವಿನಯ್ ಜಿ ಪಿ.

ಕಲ್ಯಾಣ ಚಾಳುಕ್ಯರ ಕಲೆ ಮತ್ತು ವಾಸ್ತುಶಿಲ್ಪ: ಜಮಖಂಡಿ ನಗರದ ದೇವಾಲಯಗಳ ಕುರಿತು ಒಂದು ಅಧ್ಯಯನ
ಮಂಜುನಾಥ ಪಾಟೀಲ್

VOLUME. 1
ISSUE. 1
JAN-JUN 2021

KUVEMPU UNIVERSITY
THE SOCIAL SCIENCE DIALOGUE
Peer Reviewed Open Access Journal
Prasaranga, Kuvempu University

# ಕಲ್ಯಾಣ ಚಾಳುಕ್ಯರ ಕಲೆ ಮತ್ತು ವಾಸ್ತುಶಿಲ್ಪ: ಜಮಖಂಡಿ ನಗರದ ದೇವಾಲಯಗಳ ಕುರಿತು ಒಂದು ಅಧ್ಯಯನ

**ಮಂಜುನಾಥ ಪಾಟೀಲ್**

ಉಪನ್ಯಾಸಕರು, ಬಿ.ಹೆಚ್.ಎಸ್. ಕಲಾ ಮತ್ತು ಟಿ.ಜಿ.ಪಿ. ವಿಜ್ಞಾನ ಕಾಲೇಜು, ಬಿ.ಎಲ್.ಡಿ.ಇ. ಸಂಸ್ಥೆ, ಜಮಖಂಡಿ, ಬಾಗಲಕೋಟೆ, ಕರ್ನಾಟಕ. ಇಮೇಲ್: patilmanju8@gmail.com

**ಸಾರಾಂಶ**

ಬಾಗಲಕೋಟೆ ಜಿಲ್ಲೆಯ ತಾಲೂಕು ಕೇಂದ್ರವಾದ ಜಮಖಂಡಿ ನಗರವು ತನ್ನದೇ ಆದ ಐತಿಹಾಸಿಕ ಮಹತ್ವವನ್ನು ಪಡೆದುಕೊಂಡಿದೆ. ಈ ಪ್ರದೇಶದ ವಾಯುಗುಣ, ಸುತ್ತಲಿನ ಬೆಟ್ಟಗುಡ್ಡಗಳು ಜನವಸತಿಗೆ ಪ್ರಶಸ್ತವಾಗಿದ್ದು ಪ್ರಾಗಿತಿಹಾಸ ಕಾಲಘಟ್ಟದಿಂದಲೇ ಇಲ್ಲಿ ಜನವಸತಿ ಇದ್ದದ್ದು ತಿಳಿದುಬರುತ್ತದೆ. ಅಂತಹ ಅನೇಕ ಪ್ರಾಗಿತಿಹಾಸ ನೆಲೆಗಳನ್ನು ಜಮಖಂಡಿ ತಾಲೂಕು ಪರಿಸರದಲ್ಲಿ ಶೋಧಿಸಲಾಗಿದೆ. ಇತಿಹಾಸ ಕಾಲಘಟ್ಟಕ್ಕೆ ಸಂಬಂಧಿಸಿದಂತೆ ಈ ಪ್ರದೇಶದಲ್ಲಿ ಆಳ್ವಿಕೆ ಮಾಡಿದ ಅರಸು ಮನೆತನಗಳು ತಮ್ಮ ಆಡಳಿತದ ಅನುಕೂಲಕ್ಕಾಗಿ ರಕ್ಷಣೆ, ಧಾರ್ಮಿಕ, ಶೈಕ್ಷಣಿಕ ಮತ್ತು ಸಾರ್ವಜನಿಕ ಉದ್ದೇಶಕ್ಕಾಗಿ ಇಲ್ಲಿ ಅನೇಕ ಸ್ಮಾರಕಗಳನ್ನು ನಿರ್ಮಿಸಿದ್ದಾರೆ. ಪ್ರಮುಖವಾಗಿ ಕರ್ನಾಟಕದಲ್ಲಿ ರಾಜ್ಯಭಾರ ಮಾಡಿದ ಕಲ್ಯಾಣ ಚಾಳುಕ್ಯ ಮತ್ತು ಕಲಚುರಿಗಳ ಪ್ರಭಾವ ಈ ಪ್ರದೇಶದಲ್ಲಿ ಹೆಚ್ಚಾಗಿರುವುದನ್ನು ಇಲ್ಲಿಯ ಶಾಸನಗಳು ಮತ್ತು ಇಲ್ಲಿ ನಿರ್ಮಾಣವಾದ ಶೈವ ದೇವಾಲಯಗಳು ಸ್ಪಷ್ಟಪಡಿಸುತ್ತವೆ. ಈ ಪ್ರಾಚೀನ ದೇವಾಲಯಗಳ ಹೆಸರುಗಳನ್ನು ಗುರುತಿಸುವ ಪ್ರಯತ್ನದ ಜೊತೆಗೆ ಅವುಗಳ ಕಲೆ ಮತ್ತು ವಾಸ್ತುಲಕ್ಷಣಗಳನ್ನು ಹಾಗೂ ಕಾಲಕಾಲಕ್ಕೆ ನಡೆದ ಜೀರ್ಣೋದ್ಧಾರಗಳನ್ನು ಕುರಿತಾಗಿ ಸಮಕಾಲೀನ ಶಾಸನಗಳು ಮತ್ತು ಪುರಾತ್ವೀಯ ಅವಶೇಷಗಳನ್ನು ಇಟ್ಟುಕೊಂಡು ವಿವರಿಸುವ ಪ್ರಯತ್ನವನ್ನು 'ಜಮಖಂಡಿ ನಗರದ ದೇವಾಲಯಗಳ ಕಲೆ ಮತ್ತು ವಾಸ್ತುಶಿಲ್ಪ' ಎಂಬ ಲೇಖನದಲ್ಲಿ ಮಾಡಲಾಗಿದೆ.

**ಪ್ರಮುಖ ಪದಗಳು:** ಶಾಸನಗಳ ಹಿನ್ನೆಲೆಯಲ್ಲಿ ಜಮಖಂಡಿ ನಗರದಲ್ಲಿ ನಿರ್ಮಾಣವಾದ ಪ್ರಾಚೀನ ದೇವಾಲಯಗಳು ಹಾಗೂ ಅವುಗಳ ಕಲೆ ಮತ್ತು ವಾಸ್ತುಶಿಲ್ಪ ಲಕ್ಷಣಗಳನ್ನು ಕುರಿತು ಚರ್ಚಿಸಲಾಗಿದೆ.



Full text of this paper can be downloaded online https://www.thesocialsciencedialogue.com/archive

**ವಿಸ್ತೃತ ವಿಷಯ**

ಪ್ರಾಚೀನ ಕಾಲದಿಂದಲೂ ತನ್ನದೇ ಆದ ಐತಿಹಾಸಿಕ ಮಹತ್ವವನ್ನು ಪಡೆದುಕೊಂಡಿರುವ ಬಾಗಲಕೋಟೆ ಜಿಲ್ಲೆಯ ಜಮಖಂಡಿ ತಾಲೂಕು ಪ್ರದೇಶವು ಪ್ರಾಗಿತಿಹಾಸ ಕಾಲಘಟ್ಟದಿಂದ ಬೆಳೆದು ಬಂದಿರುವ ಸಂಸ್ಕೃತಿಯನ್ನು ತನ್ನ ಒಡಲೊಳಗೆ ಇಟ್ಟುಕೊಂಡಿದೆ. ಈ ಸಂಸ್ಕೃತಿಯ ಅಂಗವಾಗಿಯೇ ಮಧ್ಯ ಹಳೆಶಿಲಾಯುಗ, ನವಶಿಲಾಯುಗ, ತಾಮ್ರಶಿಲಾಯುಗ ಮತ್ತು ಬೃಹತ್ ಶಿಲಾಯುಗ ಸಂಸ್ಕೃತಿಯ ಜನವಸತಿಯ ನೆಲೆಗಳು ಇಲ್ಲಿ ಕಂಡುಬರುತ್ತವೆ. ಈ ಸಂಸ್ಕೃತಿಯ ಕಾಲಘಟ್ಟಕ್ಕೆ ಸಂಬಂಧಿಸಿದ ಸುಮಾರು 32 ನೆಲೆಗಳು ಈ ಪ್ರದೇಶದಲ್ಲಿ ಕಂಡುಬರುತ್ತವೆ. ಇಂತಹ ಜನವಸತಿ ನೆಲೆಗಳು ಬೆಳೆದು ಬರಲು ಇಲ್ಲಿಯ ಭೌಗೋಳಿಕ ಪರಿಸರವು ಕಾರಣವಾಗಿದೆ. ಕ್ರಿ. ಪೂ. ಮೂರನೆಯ ಶತಮಾನದಿಂದಲೂ ಕರ್ನಾಟಕವು ಒಂದು ಪ್ರಭುತ್ವ ವ್ಯವಸ್ಥೆಗೆ ಒಳಪಟ್ಟಿತ್ತು. ಆ ಕುರಿತಾಗಿ ಅನೇಕ ಕುರುಹುಗಳು ಲಭ್ಯವಾಗಿವೆ. ಇದಕ್ಕೆ ಪ್ರಸ್ತುತ ಅಧ್ಯಯನ ಕ್ಷೇತ್ರವು ಹೊರತಾಗಿಲ್ಲ. ಕರ್ನಾಟಕದ ಉತ್ತರ ಭಾಗವು ಮೊದಲು ಮೌರ್ಯ ಸಾಮ್ರಾಜ್ಯ ಅನಂತರದ ಖನ್ನಿನ ಶಾತಾವಾಹನರ ಆಡಳಿತಕ್ಕೆ ಒಳಪಟ್ಟಿತ್ತು. ಆದರೆ ಈ ಕುರಿತಾಗಿ ನೇರವಾದ ಕುರುಹುಗಳು ಜಮಖಂಡಿ ತಾಲೂಕು ಪರಿಸರದಲ್ಲಿ ಲಭ್ಯವಾಗಿಲ್ಲ. ಇವರ ಆಡಳಿತಾವಧಿಯಲ್ಲಿ ಒಂದುರಾಜಕೀಯ ಹಾಗೂ ವ್ಯಾಪಕ ಪ್ರಾಂತಿಯ ಆಡಳಿತದ ಭೂಮಿಕೆ ಸಿದ್ಧವಾಯಿತು. ಭಾಷೆ ಸಾಹಿತ್ಯಗಳು ಬೆಳೆಯಲು ಅನುಕೂಲಕರವಾಯಿತು. ಹೀಗೆ ಸಾಂಸ್ಕೃತಿಕವಾಗಿ, ರಾಜಕೀಯವಾಗಿ ಬಲವಾಗಿ ಬೆಳೆಯುತ್ತಾ ಬಂದು ಕ್ರಮೇಣ ಈ ಪ್ರದೇಶದಲ್ಲಿಯೇ ಕದಂಬ, ಬಾದಾಮಿ ಚಾಳುಕ್ಯ ಸಾಮ್ರಾಜ್ಯಗಳು ಉದಯಿಸಿದವು. ಕದಂಬರ ಕಾಲಘಟ್ಟದಲ್ಲಿ ನರ್ಮದಾ ನದಿಯಿಂದ ಕಾವೇರಿಯವರೆಗೆ ಈ ಪ್ರದೇಶವು ವಿಸ್ತಾರವಾಗಿತ್ತು. ಬಾದಾಮಿ ಚಾಳುಕ್ಯರ ಅವಧಿಯಲ್ಲಿ ಅಧ್ಯಯನ ಕ್ಷೇತ್ರಕ್ಕೆ ಹೊಂದಿಕೊಂಡತ್ತಿರುವ ಬಾದಾಮಿ, ಐಹೊಳೆ, ಪಟ್ಟದಕಲ್ಲು, ಮಹಾಕೂಟಗಳು ಪ್ರಮುಖ ರಾಜಕೀಯ ಹಾಗೂ ಸಾಂಸ್ಕೃತಿಕ ಕೇಂದ್ರಗಳಾಗಿ ಬೆಳವಣಿಗೆಯನ್ನು ಹೊಂದಿದ್ದವು. ಹಾಗಾಗಿ ಬಾದಾಮಿ ಚಾಳುಕ್ಯರ ಆಡಳಿತಾವಧಿಯಿಂದ ಈ ಪ್ರದೇಶದ ಇತಿಹಾಸವು ಸ್ಪಷ್ಟಗೊಳ್ಳುತ್ತದೆ.

ಕ್ರಿ.ಶ. 8ರಿಂದ 14ನೆಯ ಶತಮಾನಗಳ ಅವಧಿಯಲ್ಲಿ ರಾಷ್ಟ್ರಕೂಟ, ಕಲ್ಯಾಣ ಚಾಳುಕ್ಯ, ಕಲಚುರಿ ಮತ್ತು ಸೇವುಣರ ಆಡಳಿತಕ್ಕೆ ಈ ಪ್ರದೇಶವು ಒಳಪಟ್ಟಿತ್ತು. ಈ ಅವಧಿಯು "ಕರ್ನಾಟಕ ಬಲವು" ಉತ್ಸಾಹಯುತ ಪ್ರಶಂಸೆಗಳಿಸುವಂತಹ ಶಕ್ತಿ ಪ್ರದರ್ಶನದ ಮತ್ತು ಯಶಸ್ಸಿನ ಸಂದರ್ಭಗಳಿಂದ ತುಂಬಿದೆ. ಸಾಮ್ರಾಜ್ಯ ವಿಸ್ತಾರ, ವಾಣಿಜ್ಯ ಮತ್ತು ಕೃಷಿ ಸಂಪನ್ಮೂಲಗಳನ್ನು ತಮ್ಮ ಕೈವಶ ಪಡಿಸಿಕೊಳ್ಳಬೇಕೆನ್ನುವ ಉದ್ದೇಶದ ಹಿನ್ನೆಲೆಯಲ್ಲಿ ಅನೇಕ ರಾಜ ಮನೆತನಗಳ ಮಧ್ಯ ಸಂಘರ್ಷಗಳು ನಡೆದಿವೆ. ಇದೇ ಅವಧಿಯಲ್ಲಿ ಧಾರ್ಮಿಕ ಕ್ಷೇತ್ರಕ್ಕೆ ತಮ್ಮದೇ ಆದ ಕೊಡುಗೆ ಕೊಟ್ಟಿದ್ದರಲ್ಲದೆ ಬಹು ದೂರಸ್ಪರ್ಶಿಯಾದ ಪರಿಣಾಮಗಳುಳ್ಳ ಸಾಮಾಜಿಕ ವ್ಯವಸ್ಥೆ ನಿರ್ಮಾಣವಾಗುವಲ್ಲಿ ಅನೇಕ ಕ್ರಾಂತಿಕಾರಿ ಬದಲಾವಣೆಗಳಾಗಿರುವುದನ್ನು ಕಾಣುತ್ತೇವೆ.

ಪ್ರಸ್ತುತ ಭೌಗೋಳಿಕವಾಗಿ ಜಮಖಂಡಿ ತಾಲೂಕು ಎಂದು ವ್ಯಾಪ್ತಿಯನ್ನು ಪಡೆದುಕೊಂಡಿದ್ದರು ಪ್ರಾಚೀನಕಾಲದಲ್ಲಿ ಕುವುಂಡಿ–3000, ತರ್ದವಾಡಿ–1000, ಬೆಳಗಲಿ–500, ಜಂಬುಖಂಡಿ–70, ತೇರದಾಳ–12, ತುಂಗಳ–12, ತೊರಗಲೆ–


Full text of this paper can be downloaded online https://www.thesocialsciencedialogue.com/archive

6000ಗಳಂತಹ ಪ್ರಾಚೀನ ಆಡಳಿತ ವಿಭಾಗಗಳಲ್ಲಿ ಹಂಚಿಹೋಗಿತ್ತು ಎಂಬುದು ಶಾಸನಗಳ ಅಧ್ಯಯನದಿಂದ ತಿಳಿದುಬರುತ್ತದೆ. ಇಲ್ಲಿಯ ಶಾಸನಗಳು ರಾಜ ಅಥವಾ ಯುವರಾಜರ ನೇರ ಆಡಳಿತವನ್ನು ಉಲ್ಲೇಖಿಸುವುದಿಲ್ಲ. ಆದರೆ ಸಾಮಂತರು, ಮಹಾಮಂಡಳೇಶ್ವರರು ಅರಸರಿಗೆ ನಿಷ್ಠರಾಗಿ ಆಡಳಿತ ನಡೆಸುತ್ತಿದ್ದುದು ಶಾಸನಗಳಿಂದ ವ್ಯಕ್ತವಾಗುತ್ತದೆ. ಅಲ್ಲದೇ ಇದು ದಕ್ಷಿಣದಲ್ಲಿ ಏಕರೂಪದ ಆಡಳಿತವನ್ನು ಸೂಚಿಸುತ್ತವೆ.

ಉತ್ತರ ಭಾರತಕ್ಕೆ ಟರ್ಕರ ಆಗಮನವು ಇಲ್ಲಿ ಹಲವು ಶತಮಾನಗಳಿಂದ ಇದ್ದ ರಾಜಕೀಯ ವ್ಯವಸ್ಥೆಯ ಲಕ್ಷಣವನ್ನೇ ಬದಲಾಯಿಸಿತು. ಅವರ ಪ್ರಭಾವವು ದಕ್ಷಿಣದ ಮೇಲೂ ಆಯಿತು. ಅಲ್ಲಾವುದ್ಧೀನ್ ಖಿಲ್ಜಿಯ ಕಾಲದಿಂದ ದಕ್ಷಿಣದ ಮೇಲೆ ನಡೆದ ನಿರಂತರ ದಾಳಿಯ ಪರಿಣಾಮವಾಗಿ ದಕ್ಷಿಣದಲ್ಲಿ ಎರಡು ಬಲಿಷ್ಠ ರಾಜ್ಯಗಳು ದಕ್ಷಿಣದಲ್ಲಿ ಉದಯಿಸಿದವು. ಅವುಗಳೇ ವಿಜಯನಗರ ಸಾಮ್ರಾಜ್ಯ ಮತ್ತು ಬಹಮನಿ ರಾಜ್ಯ, ಮುಂದೆ ಬಹಮನಿಗಳ ವಂಶಜರೆಂದು ಹೇಳಬಹುದಾದ ವಿಜಯಪುರದ ಆದಿಲ್‌ಶಾಹಿಗಳು ಈ ಪ್ರದೇಶದಲ್ಲಿ ಆಳ್ವಿಕೆಯನ್ನು ನಡೆಸಿದ್ದಾರೆ. ರಾಜಕೀಯ, ಧಾರ್ಮಿಕ ಮತ್ತು ಸಾಮಾಜಿಕವಾಗಿ ಈ ಕಾಲದ ರಾಜ್ಯನೀತಿಯು ಹೊಸ ತಿರುವನ್ನು ಪಡೆಯಿತು. ಬೇರೆಯೇ ಧರ್ಮಕ್ಕೆ ಸೇರಿದ, ಬೇರೆಯೇ ಆದ ಸಾಂಸ್ಕೃತಿಕ ವರ್ಗವಾದ ರಾಜಕೀಯ ವೈರಿಗಳು ದಖ್ಖನ್ನಿನ ವ್ಯವಹಾರಗಳಲ್ಲಿ ಸಕ್ರಿಯವಾದ ಆಸಕ್ತಿ ವಹಿಸಿದರು. ಕೃಷ್ಣಾ ಮತ್ತು ತುಂಗಭದ್ರಾ ನದಿಗಳ ದೂಅಬ್ ಪ್ರದೇಶದ ಮೇಲೆ ರಾಜಕೀಯ ಪ್ರಭುತ್ವವನ್ನು ಸ್ಥಾಪಿಸುವ ಸಲುವಾಗಿ ಅತ್ಯಂತ ಉಗ್ರವಾದ ಯುದ್ಧಗಳಲ್ಲಿ ನಿರತರಾದರು. ಅದು ರಾಜಕೀಯ ಹೋರಾಟವಾಗಿದ್ದರೂ ಸಹ ಧಾರ್ಮಿಕ ಸ್ವರೂಪವನ್ನು ಪಡೆದುಕೊಂಡಿತ್ತು. ಇವರನ್ನು ರಾಜಕೀಯ ಕ್ಷೇತ್ರದಿಂದ ಬದಿಗೆ ಸರಿಸಿ ಮೊಗಲರು ಮತ್ತು ಮರಾಠರು ಈ ಪ್ರದೇಶದ ರಂಗದ ಮೇಲೆ ಕಾಣಿಸಿಕೊಂಡು ಇಲ್ಲಿನ ರಾಜಕೀಯ ವ್ಯವಸ್ಥೆಗೆ ಹೊಸ ಬಣ್ಣವನ್ನು ಕೂಡಿಸಿದರು. ಅದಕ್ಕೆ ಜಮಖಂಡಿ ತಾಲೂಕು ಪ್ರದೇಶವು ಹೊರತಾಗಿರಲಿಲ್ಲ. ಇದೇ ಸಂದರ್ಭದಲ್ಲಿ ಕಾಣಿಸಿಕೊಂಡ ಜಮಖಂಡಿ ಸಂಸ್ಥಾನಿಕರು ಭಾರತಕ್ಕೆ ಸ್ವಾತಂತ್ರ್ಯ ಸಿಗುವವರೆಗೂ ತಮ್ಮ ಅಸ್ತಿತ್ವವನ್ನು ಶತಮಾನಗಳ ಕಾಲ ಜಮಖಂಡಿ ಪರಿಸರದ ಮೇಲೆ ಉಳಿಸಿಕೊಂಡು ಬಂದರು. ಈ ಕುರಿತಾಗಿ ಸಾಹಿತ್ತಿಕ ಆಕರಗಳು, ಶಾಸನಗಳು, ನಾಣ್ಯಗಳು, ದೇವಾಲಯ, ಕೋಟೆ–ಕೋತ್ತಲುಗಳು ಮತ್ತು ಪುರಾತತ್ವೀಯ ಅವಶೇಷಗಳು ಮಾಹಿತಿಯನ್ನು ಒದಗಿಸುತ್ತವೆ. ಇಂತಹ ಲಿಖಿತ ಮತ್ತು ಪುರಾತತ್ವ ಆಕರಗಳು ಅಷ್ಟೇ ಅಲ್ಲದೆ ಈ ಪ್ರದೇಶದ ಇತಿಹಾಸವನ್ನು ಭಿನ್ನವಾದ ದೃಷ್ಠಿಕೋನದಡಿಯಲ್ಲಿ ಅಧ್ಯಯನ ಮಾಡಲು ಮೌಖಿಕ ಕಥನರೂಪದ ಆಧಾರಗಳು ಜೀವಂತ ಸಾಕ್ಷಿಗಳಾಗಿವೆ.

ಬಾದಾಮಿ ಚಾಳುಕ್ಯರು ಬಾಗಲಕೋಟೆ ಜಿಲ್ಲೆಯ ಬದಾಮಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಈ ಪ್ರದೇಶದಲ್ಲಿ ಅನೇಕ ದೇವಾಲಯ, ಕೋಟೆಗಳನ್ನು ನಿರ್ಮಿಸಿದ್ದಾರೆ. ಆದರೆ ಜಿಲ್ಲೆಯ ಪ್ರಮುಖ ತಾಲೂಕು ಕೇಂದ್ರವಾದ ಜಮಖಂಡಿ ಪರಿಸರದಲ್ಲಿ ಕಲ್ಯಾಣ ಚಾಳುಕ್ಯ ಶೈಲಿಯಲ್ಲಿ ನಿರ್ಮಾಣವಾದ ದೇವಾಲಯಗಳೇ ಹೆಚ್ಚಾಗಿ ಕಂಡುಬರುತ್ತವೆ. ಹಾಗಾಗಿ ಇವರ ಕಾಲಾವಧಿಯಿಂದಲೇ ಇಲ್ಲಿ ದೇವಾಲಯಗಳು ಈ ಪ್ರದೇಶದಲ್ಲಿ ನಿರ್ಮಾಣವಾದವೇ ಅಥವಾ ಈ ಮೂದಲು ಇದ್ದ ದೇವಾಲಯಗಳನ್ನು ಜೀರ್ಣೋದ್ಧಾರಗೊಳಿಸಿದರೆ, ಸಂಪೂರ್ಣವಾಗಿ ಪುನರ್ ನಿರ್ಮಾಣ ಮಾಡಿದರೆ ಅಥವಾ ಕಾಲನ ತುಳಿತಕ್ಕೆ ಸಿಕ್ಕು ನಾಶ ಹೊಂದಿದವೇ ಎಂಬುದು ತಿಳಿದು ಬರುವುದಿಲ್ಲ. ಇದಕ್ಕೆ ಶಾಸನಗಳು ಮೌನವಹಿಸುತ್ತವೆ. ಈ ಪ್ರದೇಶದಲ್ಲಿ ಜೈನ, ವೈಷ್ಣವ ದೇವಾಲಯಗಳು ವಿರಳವಾಗಿದ್ದು, ಶೈವ ದೇವಾಲಯಗಳು ಹೇರಳವಾಗಿವೆ. ಕಾಲಕ್ರಮೇಣ


Full text of this paper can be downloaded online https://www.thesocialsciencedialogue.com/archive

ಜೀರ್ಣೋದ್ಧಾರವಿಲ್ಲದೆ ಅನೇಕ ದೇವಾಲಯಗಳು ಅವಸಾನದ ಅಂಚಿನಲ್ಲಿವೆ. ಅವುಗಳಲ್ಲಿ ಏಕಕೂಟ ಮತ್ತು ತ್ರಿಕೂಟ ದೇವಾಲಯಗಳು ಈ ಪ್ರದೇಶದಲ್ಲಿ ಕಂಡುಬರುತ್ತವೆ. ಪ್ರಸ್ತುತ ಲೇಖನದಲ್ಲಿ ಜಮಖಂಡಿ ನಗರದಲ್ಲಿರುವ ರಾಮೇಶ್ವರ, ನಂದಿಕೇಶ್ವರ, ಪ್ರಭುಲಿಂಗೇಶ್ವರ, ಕಲ್ಮೇಶ್ವರ, ಮತ್ತು ಜಂಭುಲಿಂಗೇಶ್ವರ ದೇವಾಲಯಗಳನ್ನು ಅಧ್ಯಯನಕ್ಕೊಳಪಡಿಸಿ ಅವುಗಳ ನಿರ್ಮಾಣದ ಕಾಲ ಹಾಗೂ ಕಲೆ ಮತ್ತು ವಾಸ್ತುಶಿಲ್ಪವನ್ನು ಕುರಿತಾಗಿಚರ್ಚಿಸಲಾಗಿದೆ.

**ಗ್ರಾಮ: ಜಮಖಂಡಿ** **ಹೆಸರು: ರಾಮೇಶ್ವರದೇವಾಲಯ**

**ಸ್ಥಳ: ಪಟವರ್ಧನಅರಮನೆ ಹತ್ತಿರ** **ಅಭಿಮುಖ: ಪೂರ್ವಾಭಿಮುಖ**

**ಸ್ಥಿತಿ: ಉತ್ತಮ** **ಕಾಲ: ಕಲ್ಯಾಣ ಚಾಳುಕ್ಯ**

ಜಮಖಂಡಿ ನಗರದ ಪಶ್ಚಿಮಕ್ಕೆ ಎತ್ತರವಾದ ಬೆಟ್ಟದ ಮೇಲೆ ಪಟವರ್ಧನ ಮನೆತನಕ್ಕೆ ಸಂಬಂಧಿಸಿದಂತೆ ಹಲವಾರು ಅವಶೇಷಗಳು ಕಂಡುಬರುತ್ತವೆ. ಅಲ್ಲಿ ಅರಮನೆ, ಅಧಿಕಾರಿ ವರ್ಗದವರ ಮನೆಗಳು, ಕೋಟೆ, ಇವರ ಕಾಲಘಟ್ಟದಲ್ಲಿ ನಿರ್ಮಿಸಿದ ದೇವಾಲಯಗಳು ಹಾಗೂ ಇತರೇ ಅವಶೇಷಗಳನ್ನು ಕಾಣಬಹುದು. ಈ ಅರಮನೆಯ ಹತ್ತಿರವೇ ಪ್ರಾಚೀನ ಕಾಲಘಟ್ಟಕ್ಕೆ ಸಂಬಂಧಿಸಿದಂತೆ ರಾಮೇಶ್ವರ ದೇವಾಲಯವು ಕಂಡುಬರುತ್ತದೆ. ದೇವಾಲಯದ ತಳವಿನ್ಯಾಸವನ್ನು ಗಮನಿಸಿದಾಗ ಇದು ಏಕಕೂಟ ಮಾದರಿಯ ದೇವಾಲಯವಾಗಿದ್ದು, ಗರ್ಭಗೃಹ, ಅಂತರಾಳ, ತೆರೆದ ನವರಂಗ ಭಾಗಗಳನ್ನು ಹೊಂದಿದೆ. ಪೂರ್ವಾಭಿಮುಖವಾಗಿರುವ ಗರ್ಭಗೃಹದ ದ್ವಾರವು ಚತು ಶಾಖೆಗಳನ್ನು ಹೊಂದಿದ್ದು ಅವು ವಜ್ರ, ವಲ್ಲಿ, ಸ್ತಂಭ ಮತ್ತು ಸಿಂಹ ಶಾಖೆಗಳಾಗಿವೆ. ಪೇದ್ಯಾ ಭಾಗವು ನೀರಾಲಂಕೃತವಾಗಿದೆ. ಲಲಾಟದಲ್ಲಿ ಗಜಲಕ್ಷ್ಮೀ ಶಿಲ್ಪವಿದೆ. ಸ್ತಂಭಶಾಖೆಯು ಪ್ರಧಾನವಾಗಿದ್ದು ಪೀಠ, ವೃತ್ತಾಕಾರದ ದಂಡ, ತಡಿ, ಮಂಡಿ, ಫಲಕ ಮತ್ತು ಭೋದಿಗೆಗಳನ್ನು ಹೊಂದಿದೆ. ಹೊಸ್ತಿಲಿನ ಮಧ್ಯಭಾಗವು ಪೆಟ್ಟಿಗೆಯ ರೀತಿ ಮುಂಚಾಚಿದ್ದು ಪದ್ಮದ ಅಲಂಕರಣೆಯನ್ನು ಹೊಂದಿದೆ. ಪೇದ್ಯಾ ಭಾಗದಲ್ಲಿ ಶಾಖೆಗಳಿಗೆ ಅನುಗುಣವಾಗಿ ಯಾವುದೇ ಅಲಂಕರಣೆಗಳು ಇಲ್ಲದೆ ನಿರಲಂಕೃತವಾಗಿದೆ. ಗರ್ಭಗೃಹದಲ್ಲಿ ಶಿವಲಿಂಗವನ್ನು ಪ್ರತಿಷ್ಠಾಪಿಸಲಾಗಿದ್ದು ಪ್ರಾಚೀನ ಕಾಲಾವಧಿಯದ್ದಾಗಿದೆ. ಗರ್ಭಗೃಹದ ಎಡ ಮತ್ತು ಹಿಂಭಾಗದ ಅಂತರ್ಭಿತ್ತಿಯ ಮಧ್ಯದಲ್ಲಿ ಒಂದು ಅಡಿ ಮುಂಚಾಚಿದಂತೆ ಕಲ್ಲು ಫಳಿಯ ರಚನೆಯಿದೆ. ಗರ್ಭಗೃಹದ ಒಳಭಿತ್ತಿಯಲ್ಲಿ ಅನಲಂಕೃತವಾದ ಭದ್ರತಾ ಸ್ತಂಭಗಳು, ವಿತಾನ ಭಾಗವನ್ನು ಕಲ್ಲಿನ ತೊಲೆಗಳ ಜೋಡಣೆಗಳಿಂದ ಮುಚ್ಚಲಾಗಿದೆ. ಮೂರು ಸ್ತರಗಳಲ್ಲಿ ಕಲ್ಲಿನ ತೊಲೆಗಳನ್ನು ಚೌಕದ ಮೂಲೆ ಭಾಗವನ್ನು ಮುಚ್ಚುವಂತೆ ಜೋಡಿಸಲಾಗಿದೆ. ಹಾಗಾಗಿ ವಿತಾನವು ಸ್ವಲ್ಪ ಒಳಮುಖವಾಗಿ ಏರಿದಂತೆ ಕಂಡುಬರುತ್ತದೆ. ನಂತರ ಮಧ್ಯದಲ್ಲಿಒಂದು ಪದ್ಮದ ಅಲಂಕರಣೆಯಿರುವ ಶಿಲಾಫಲಕವನ್ನು ಮುಚ್ಚಲಾಗಿದ್ದು ನಾಭಿಚ್ಛಂದದ ರೀತಿಯಲ್ಲಿ ನಿರ್ಮಿಸಲಾಗಿದೆ.

ಗರ್ಭಗೃಹಕ್ಕೆ ಹೊಂದಿಕೊಂಡಂತೆ ಗರ್ಭಗೃಹಕ್ಕಿಂತಲೂ ಸ್ವಲ್ಪಚಿಕ್ಕದಾದ ಅಂತರಾಳವಿದೆ. ಮೂಲಃತದಲ್ಲಿ ಇದು ತೆರೆದ ಅಂತರಾಳವಾಗಿದ್ದು ನಂತರ ಅವಧಿಯಲ್ಲಿ ಅದಕ್ಕೆ ದ್ವಾರವನ್ನು ಸೇರಿಸಿ ಮುಚ್ಚಿದ ಅಂತರಾಳವಾಗಿ ಮಾರ್ಪಡಿಸಲಾಗಿದೆ. ಇದರ ವಿತಾನ ಭಾಗವು ಸಹ ನಾಭಿಚ್ಛಂದ ರೀತಿಯಲ್ಲಿದೆ. ಪ್ರಸ್ತುತ ಗರ್ಭಗೃಹ ಮತ್ತು ಅಂತರಾಳದ ಅಂತರ್ಭಿತ್ತಿಗಳಿಗೆ ಟೈಲ್ಸ್ ಹಾಕಲಾಗಿದೆ.



Full text of this paper can be downloaded online https://www.thesocialsciencedialogue.com/archive

ನವರಂಗ ಎಂದು ಕರೆಯಲ್ಪಡುವ ಭಾಗವು ಸುತ್ತಲೂ ಗೋಡೆಯಿಂದ ಆವೃತ್ತವಾಗಿರದೆ ತೆರೆದ ರೀತಿಯಲ್ಲಿದೆ. ಅರ್ಧಗೋಡೆಯ ಮೇಲೆ ಕಕ್ಷಾಸನ ರಚನೆಯನ್ನು ಕಾಣಬಹುದು. ಅದರ ಹೊರಭಾಗದಲ್ಲಿ ಸೀಮೆಂಟನ್ನು ಲೇಪಿಸಿರುವುದರಿಂದ ಯಾವುದೇ ಅಲಂಕರಣೆಗಳು ಕಂಡುಬರುವುದಿಲ್ಲ. ನವರಂಗ ಭಾಗಕ್ಕೆ ಪ್ರವೇಶಿಸಲು ಮೂರು ದಿಕ್ಕುಗಳಿಗೂ ಸೋಪಾನಗಳಿದ್ದು ಅವು ನೆಲದಲ್ಲಿ ಹೂತು ಹೋಗಿವೆ. ಇವುಗಳಿಗೆ ಹೊಂದಿಕೊಂಡು ಇಕ್ಕೆಲಗಳಲ್ಲಿ ಹಸ್ತಹಸ್ತಿಗಳು ಮಾತ್ರ ಕಂಡುಬರುತ್ತವೆ. ಮಧ್ಯಭಾಗದಲ್ಲಿ ಅರ್ಧ ಅಡಿ ಎತ್ತರವಾದ ರಂಗವೇದಿಕೆಯ ಮೇಲೆ ನಾಲ್ಕು ಸ್ತಂಭಗಳಿದ್ದು ಅವು ಪೀಠ, ದಂಡ, ತಡಿ, ಫಲಕ, ಭೋದಿಗೆಗಳನ್ನು ಹೊಂದಿವೆ. ದಂಡ ಭಾಗದಲ್ಲಿ ಎರಡು ಚೌಕಪಟ್ಟಿಕೆಗಳ ಮಧ್ಯ ವೃತ್ತಾಕಾರವಾಗಿ 18 ಪಟ್ಟಿಕೆಗಳು ಮತ್ತು ಮತ್ತೆ ಅದರ ಮಧ್ಯ ಪದ್ಮದ ಅಲಂಕರಣೆಯ 8 ಪಟ್ಟಿಕೆಗಳು ಇವೆ. ಉಳಿದಂತೆ ಯಾವುದೇ ಅಲಂಕರಣೆಗಳು ಕಂಡುಬರುವುದಿಲ್ಲ. ವಿತಾನದಲ್ಲಿ ನಾಭಿಚ್ಛಂದದ ಅಲಂಕರಣೆಯಿದೆ. ನವರಂಗದ ಮಧ್ಯ ನಂತರ ಕಾಲಾವಧಿಯ ನಂದಿ ವಿಗ್ರಹವನ್ನು ಪ್ರತಿಷ್ಠಾಪಿಸಲಾಗಿದೆ. ಅಲ್ಲದೆ ನವರಂಗದಲ್ಲಿ ಕಾರ್ತಿಕೇಯ, ಲಕ್ಷ್ಮೀನಾರಾಯಣ, ನಾಗ ಶಿಲ್ಪಗಳಿವೆ. ತೆರೆದಕಕ್ಷಾಸನ ಭಾಗದಲ್ಲಿ 16 ಕಿರು ಸ್ತಂಭಗಳಿದ್ದು ಅವು ಕಿರಿದಾದದಂಡ, ತಡಿ, ಫಲಕ, ಬೋದಿಗೆಗಳನ್ನು ಹೊಂದಿವೆ. ನವರಂಗದ ಹೊರಭಾಗದಲ್ಲಿ ಸುತ್ತಲು ಇಳಿಜಾರದ ಛಾದ್ಯ ಭಾಗ ಕಂಡುಬರುತ್ತದೆ. ದೇವಾಲಯದ ಹೊರ ಭಿತ್ತಿಯನ್ನು ನಂತರ ಅವಧಿಯಲ್ಲಿ ಜೀರ್ಣೋದ್ಧಾರಗೊಳಿಸಿದ್ದು ಪ್ರಾಚೀನ ಕಾಲದ ಶೈಲಿಯನ್ನು ಅನುಕರಿಸುವ ಪ್ರಯತ್ನವನ್ನು ಮಾಡಿದ್ದಾರೆ. ಅಂದರೆ ಅದರಲ್ಲಿ ಭದ್ರಭಾಗವು ಮುಂಚಾಚಿದ್ದು ಅವುಗಳಲ್ಲಿ ದೇವಕೋಷ್ಠಕದರೀತಿಯ ರಚನೆಗಳನ್ನು ಕಾಣಬಹುದು. ನೂತನವಾಗಿ ಶಿಖರವನ್ನು ರಚಿಸಲಾಗಿದೆ. ಇನ್ನುಳಿದಂತೆ ಯಾವುದೇ ಅಲಂಕರಣೆ ಭಾಗಗಳು ಕಂಡುಬರುವುದಿಲ್ಲ.

ಈ ದೇವಾಲಯದ ಮುಂಭಾಗದಲ್ಲಿಯ ಪ್ರಾಚೀನ ಪುಷ್ಕರಣಿಯಿದ್ದುಅದು ಪಟವರ್ಧನ ಅರಸರಕಾಲಘಟ್ಟದಲ್ಲಿ ಜೀರ್ಣೋದ್ಧಾರಗೊಳಿಸಲಾಗಿದೆ. ಇದೇ ದೇವಾಲಯದ ಪ್ರಾಂಗಣದಲ್ಲಿ ದತ್ತಾತ್ರೇಯ, ಲಕ್ಷ್ಮೀ ದೇವಾಲಯಗಳಿವೆ. ಅಲ್ಲದೆ ಸುತ್ತಲೂದೇವಾಲಯಕ್ಕೆ ಪ್ರಾಕಾರವನ್ನು ನಿರ್ಮಿಸಿದ್ದು ಹಿಂಬದಿಯಲ್ಲಿ ಪ್ರಾಕಾರಗೋಡೆಗೆ ಹೊಂದಿಕೊಂಡು ವಸತಿ ಕೋಣೆಗಳನ್ನು ನಿರ್ಮಿಸಿದ್ದಾರೆ. ಇವೆಲ್ಲವುಗಳು ಪಟವರ್ಧನ ಸಂಸ್ಥಾನಿಕರ ಕಾಲಘಟ್ಟದವು. ಈ ಮೇಲಿನ ಲಕ್ಷಣಗಳನ್ನು ಗಮನಿಸಿದಾಗ ರಾಮೇಶ್ವರ ದೇವಾಲಯವು ಕಲ್ಯಾಣ ಚಾಳುಕ್ಯರ ಕಾಲಘಟ್ಟದಲ್ಲಿ ನಿರ್ಮಿಸಿದ್ದು ತಿಳಿದುಬರುತ್ತದೆ. ಆದರೆ ಈ ದೇವಾಲಯ ಕೆಲವು ಭಾಗಗಳನ್ನು ಪಟವರ್ಧನ ಅರಸರಕಾಲದಲ್ಲಿ ಜೀರ್ಣೋದ್ಧಾರಗೊಳಿಸಲಾಗಿದೆ.

ಈ ದೇವಾಲಯದ ಆವರಣದಲ್ಲಿ ಹುಲಿಯನ್ನು ಕೊಲ್ಲುತ್ತಿರುವ ಸಳನ ಶಿಲ್ಪವನ್ನು ಹೋಲುವ ಒಂದು ತೃಟಿತ ಶಿಲ್ಪವಿದ್ದು ಇದರ ಆಧಾರದ ಮೇಲೆ ಇದು ಹೋಯ್ಸಳರ ದೇವಾಲಯವೆಂದು ಸ್ಥಳೀಯ ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಆದರೆ ಇದು ಹೋಯ್ಸಳರ ಕಾಲಘಟ್ಟದ ದೇವಾಲಯವಾಗಿಲ್ಲದಿರುವುದು ದೇವಾಲಯದ ಲಕ್ಷಣಗಳನ್ನು ಗಮನಿಸಿದಾಗ ಗುರುತಿಸಬಹುದು. ಜೊತೆಗೆ ಹೋಯ್ಸಳರು ತುಂಗಭದ್ರಾ ನದಿಯನ್ನು ದಾಟಿ ಈಗಿನ ಧಾರವಾಡ ಹತ್ತಿರ ಇರುವ ಹೂಲಿಯವರೆಗೆ ಅವರು ಬಂದಿದ್ದು ಶಾಸನಗಳು ಹಾಗೂ ಇತರೆ ಪುರಾತತ್ವೀಯ ಆಕರಗಳಿಂದ ತಿಳಿದು ಬರುತ್ತದೆ. ಜೊತೆಗೆ ಹುಲಿಯನ್ನು ಕೊಲ್ಲುತ್ತಿರುವ ಸಳನ ಶಿಲ್ಪ ಇದು ಹುಲಿಯ ಬದಲಿಗೆ ಸಿಂಹವನ್ನು ಹೋಲುತ್ತದೆ. ಶಿಲ್ಪವು ತೃಟಿತಗೊಂಡಿರುವುದರಿಂದ ಸಷ್ಟತೆ ಇಲ್ಲ ಆದರೂ ಈ ರೀತಿಯ ಹಲವಾರು ಶಿಲ್ಪಗಳು ಕಲ್ಯಾಣ ಚಾಳುಕ್ಯರ ಕಾಲಘಟ್ಟದಲ್ಲಿ ಇದ್ದವು ಎಂಬುದು ತಿಳಿದುಬರುತ್ತದೆ. ಅಲ್ಲದೆ ಇಲ್ಲಿರುವ ಶಿಲ್ಪವು ಹೊಯ್ಸಳರ ರಾಜ ಲಾಂಛನವೆಂದು ಹೇಳಲು ಯಾವ ಆಧಾರಗಳೂ ಇಲ್ಲ. ಇಲ್ಲಿ ಕಂಡುಬರುವುದು ಸಿಂಹವನ್ನು ಕೊಲ್ಲುತ್ತಿರುವ ವ್ಯಕ್ತಿಯ ಶಿಲ್ಪ, ಈ ಪ್ರಾಣಿಯ ದೇಹವನ್ನು



Full text of this paper can be downloaded online https://www.thesocialsciencedialogue.com/archive

ಗಮನಿಸಿದಾಗ ಅದು ಸಿಂಹವೆಂದು ಗೊತ್ತಾಗುತ್ತದೆ. ಹುಲಿಯಾಗಿದ್ದರೆ ಮೈಮೇಲೆ ಪಟ್ಟಿಗಳಿರುತ್ತಿದ್ದವು. ಹೊಯ್ಸಳ ಶಿಲ್ಪಿಗಳು ಸೀರೆಯ ನೆರಿಗೆಗಳನ್ನೂ, ಒಡವೆಗಳ ಸೂಕ್ಷ್ಮ ಕುಸುರಿಯನ್ನೂ ಸಹ ಕಂಡರಿಸಬಲ್ಲ ಅದ್ಭುತ ಚಾಕಚಕ್ಯತೆಯನ್ನು ಹೊಂದಿದ ಶಿಲ್ಪಿಗಳು. ಅವರು ಹುಲಿಯ ಮೈಮೇಲಿನ ಪಟ್ಟಿಗಳನ್ನೂ ಸಹಾ ಎದ್ದು ಕಾಣುವಂತೆ ಬಿಡಿಸುತ್ತಿದ್ದರು. ಹೊಯ್ಸಳರ ರಾಜ ಲಾಂಛನವನ್ನು ಕುರಿತಾಗಿ ಶಾಸನಗಳು ಸ್ಪಷ್ಟಪಡಿಸುವಂತೆ 'ಹುಲಿ' ಅಥವಾ 'ಬೆತ್ತದ ಸೆಳೆ' ಯೊಂದಿಗಿರುವ 'ಹುಲಿ' ಹೊಯ್ಸಳರ ರಾಜ ಲಾಂಛನ ಎಂಬುದು ಹೊಯ್ಸಳರ ಹತ್ತಾರು ಶಾಸನಗಳಲ್ಲಿ ದಾಖಲಾಗಿರುವುದನ್ನು ಗಮನಿಸಬಹುದು (ಮಂಜುನಾಥ, 2006). ಈ ರೀತಿಯ ಶಿಲ್ಪಗಳು ವಾಸ್ತವವಾಗಿ ಮೊದಲಿಗೆ ಕಲ್ಯಾಣ ಚಾಳುಕ್ಯರ ದೇವಾಲಯಗಳಲ್ಲಿಯೇ ಕಂಡುಬರುತ್ತವೆ. ಗುಲಬರ್ಗಾ ಜಿಲ್ಲೆಯ ಏವೂರಿನಲ್ಲಿರುವ ಈಶ್ವರ ದೇವಾಲಯವು ಕಲ್ಯಾಣ ಚಾಳುಕ್ಯರ ದೇವಾಲಯವಾಗಿದ್ದು ಅಲ್ಲಿ ಇಂತಹ ಶಿಲ್ಪ ಇರುವುದನ್ನು ಗಮನಿಸಬಹುದು (ಮಂಜುನಾಥ, 2006). ಹಾಗಾಗಿ ಇಲ್ಲಿ ಕಂಡುಬರುವ ಶಿಲ್ಪವು ಪೂರ್ಣ ಪ್ರಮಾಣದಲ್ಲಿ ಇಲ್ಲದೇ ಇದ್ದರೂ ಸಹ ಇದೊಂದು ಸಿಂಹವನ್ನು ಕೊಲ್ಲುತ್ತಿರುವ ವ್ಯಕ್ತಿಯ ಶಿಲ್ಪವಾಗಿದೆ ಹಾಗಾಗಿ ಇದು ಹೊಯ್ಸಳರ ಕಾಲಘಟ್ಟದ ದೇವಾಲಯವಾಗಿರದೇ, ದೇವಾಲಯದ ಲಕ್ಷಣಗಳನ್ನು ಆಧರಿಸಿ ಇದೊಂದು ಕಲ್ಯಾಣ ಚಾಳುಕ್ಯರ ದೇವಾಲಯವೆಂದು ಹೇಳಬಹುದು.

**ಗ್ರಾಮ: ಜಮಖಂಡಿ** **ಹೆಸರು: ಜಂಬುಕೇಶ್ವರದೇವಾಲಯ**

**ಸ್ಥಳ: ನಗರದ ಮಧ್ಯ** **ಅಭಿಮುಖ: ಉತ್ತರಾಭಿಮುಖ**

**ಸ್ಥಿತಿ: ಉತ್ತಮ** **ಕಾಲ: ಕಲ್ಯಾಣ ಚಾಳುಕ್ಯ**

ಜಮಖಂಡಿ ಪ್ರದೇಶದಲ್ಲಿ ವಿಶಾಲವಾದ ತಳ ವಿನ್ಯಾಸದ ಮೇಲೆ ನಿರ್ಮಾಣವಾಗಿರುವ ದೇವಾಲಯಗಳಲ್ಲಿ ಜಂಬುಕೇಶ್ವರ ದೇವಾಲಯವು ಒಂದು. ಉತ್ತರಾಭಿಮುಖವಾಗಿ ನಿರ್ಮಾಣವಾದ ಈ ತ್ರಿಕೂಟ ಮಾದರಿಯ ದೇವಾಲಯ ನಗರದ ಮಧ್ಯದಲ್ಲಿರುವ ಕೆರೆಯ ಹತ್ತಿರಕಂಡು ಬರುತ್ತದೆ. ಮೂರು ಗರ್ಭಗೃಹ, ಅದಕ್ಕೆ ಹೊಂದಿಕೊಂಡಂತೆ ತೆರೆದ ಅಂತರಾಳಗಳು, ನವರಂಗ ಮತ್ತು ಸಭಾಮಂಟಪಗಳನ್ನು ಹೊಂದಿದೆ. ಉತ್ತರಾಭಿಮುಖವಾಗಿರುವ ಮುಖ್ಯ ಗರ್ಭಗೃಹದ ದ್ವಾರಬಂಧವು ಅರ್ಧ ಅಡಿ ಎತ್ತರದ ಹೊಸ್ತಿಲ ಮೇಲೆ ತ್ರಿಶಾಖೆಯಿಂದ ಕೂಡಿದ್ದು, ವಜ್ರ, ವಲ್ಲಿ ಮತ್ತು ಸ್ತಂಭಶಾಖೆಗಳನ್ನು ಹೊಂದಿದೆ. ಸ್ತಂಭ ಶಾಖೆಯು ಹೆಚ್ಚು ಮುಂಚಾಚಿದ್ದು, ಕಪೋತದಂತೆ ಮುಂಚಾಚಿರುವ ಭಾಗಕ್ಕೆ ಆಶ್ರಯವನ್ನು ಒದಗಿಸುವ ರೀತಿಯಲ್ಲಿದೆ. ಮೊದಲ ಶಾಖೆ ದ್ವಾರದ ಮೇಲಿನ ಭಾಗದಲ್ಲೂ ಮುಂದುವರೆದು ಲಲಾಟ ಫಲಕದಲ್ಲಿ ಸಂಧಿಸಿದೆ. ಲಲಾಟದಲ್ಲಿ ಗಜಲಕ್ಷ್ಮೀ ಶಿಲ್ಪವಿದೆ. ಶಾಖೆಗಳ ಪೇದ್ಯಾಭಾಗವು ಅಲಂಕಾರ ರಹಿತವಾಗಿದೆ. ಗರ್ಭಗೃಹದ ಒಳ ಭಿತ್ತಿಯು ನಾಲ್ಕು ಮೂಲೆ ಕಂಬಗಳಿಂದ ಕೂಡಿದೆ. ಮತ್ತು ಹಿಂಭಾಗದಲ್ಲಿ ಒಂದು ಅಡಿ ಅಗಲದಕಲ್ಲು ಘಳಿ ಮುಂಚಾಚಿದೆ. ಛತ್ತಿನಲ್ಲಿ ನಾಭಿಚ್ಛಂದವಿದ್ದು ಮಧ್ಯ ಕಮಲದ ಅಲಂಕರಣೆಯಿದೆ. ಗರ್ಭಗೃಹದ ಮಧ್ಯದಲ್ಲಿಜಂಬುಕೇಶ್ವರ ಎಂದು ಕರೆಯಲ್ಪಡುವ ಪ್ರಾಚೀನ ಶಿಲಿಂಗವನ್ನು ಕಾಣಬಹುದು.

ಪಶ್ಚಿಮಾಭಿಮುಖವಾಗಿರುವ ಗರ್ಭಗೃಹದ ದ್ವಾರವು ಮೂರು ಶಾಖೆಗಳನ್ನು ಹೊಂದಿದ್ದು ಅದರಲ್ಲಿ ಸ್ತಂಭಶಾಖೆ ಮಾತ್ರ ಸ್ಪಷ್ಟವಾಗಿದ್ದು ಉಳಿದೆರೆಡು ಶಾಖೆಗಳು ನೀರಲಂಕೃತವಾಗಿವೆ. ಲಲಾಟದಲ್ಲಿ ಗಜಲಕ್ಷ್ಮೀ ಶಿಲ್ಪವಿದೆ. ಪೂರ್ವಾಭಿಮುಖವಾಗಿರುವ ಗರ್ಭಗೃಹದದ್ವಾರವು ದ್ವಿಶಾಖೆಗಳನ್ನು ಹೊಂದಿದ್ದು, ಅವು ವಜ್ರ ಮತ್ತು ಸ್ತಂಭಶಾಖೆಗಳಾಗಿವೆ. ಈ ಸ್ತಂಭ ಶಾಖೆ ವೃತ್ತಾಕಾರವಾಗಿರದೆ ಭದ್ರತಾ ಸ್ತಂಭಗಳಂತೆ ಚಪ್ಪಟೆಯಾಗಿದ್ದು ಅಲಂಕೃತವಾಗಿದೆ. ಲಲಾಟದಲ್ಲಿ ಗಜಲಕ್ಷ್ಮೀಯ ಶಿಲ್ಪವಿದೆ. ಈ



Full text of this paper can be downloaded online https://www.thesocialsciencedialogue.com/archive

ಮೂರು ಗರ್ಭಗೃಹಗಳ ವಿತಾನಭಾಗಗಳು ನಾಭಿಚ್ಛಂದದ ರೀತಿಯಲ್ಲಿ ಕಂಡುಬರುತ್ತವೆ. ಗರ್ಭಗೃಹದ ಮುಂದಿನ ಅರ್ಧ ಮಂಟಪ ಅಥವಾ ತೆರೆದ ಅಂತರಾಳಗಳು ಗರ್ಭಗೃಹಕ್ಕಿಂತ ಚಿಕ್ಕದಾಗಿವೆ. ಪಶ್ಚಿಮಾಭಿಮುಖವಾಗಿರುವ ಅಂತರಾಳಕ್ಕೆ ನಂತರ ಅವಧಿಯಲ್ಲಿ ದ್ವಾರವನ್ನು ಕೂರಿಸಲಾಗಿದೆ.

ಮೂರು ಅಂತರಾಳಗಳನ್ನು ಒಂದೆಡೆ ಸೇರಿಸುವ ನವರಂಗವು, ವಿಶಾಲವಾಗಿದ್ದು, ಮಧ್ಯದಲ್ಲಿ ಅರ್ಧ ಅಡಿ ಎತ್ತರವಾದ ರಂಗವೇದಿಕೆ ಇದೆ. ವೇದಿಕೆಯ ನಾಲ್ಕು ಮೂಲೆಗಳಲ್ಲಿ ಅಲಂಕೃತ ನಾಲ್ಕು ಸ್ತಂಭಗಳಿದ್ದು ಪೀಠ, ದಂಡ, ತಡಿ, ಫಲಕ, ಬೋದಿಗೆಗಳನ್ನು ಹೊಂದಿವೆ. ಅಲ್ಲದೆ ದಂಡ ಭಾಗದ ಎರಡು ಚೌಕಗಳ ಮಧ್ಯ ವೃತ್ತಾಕಾರದ 16 ಮತ್ತು 8 ಪಟ್ಟಿಕೆಗಳ ರಚನೆಯಿದೆ. ನವರಂಗದ ವಿತಾನದಲ್ಲಿ ನಾಭಿಚ್ಛಂದ ಅಲಂಕರಣೆಯಿದೆ. ಅಲ್ಲದೆ ನವರಂಗದ ಒಳಭಿತ್ತಿಯಲ್ಲಿ ಒಟ್ಟು ಎಂಟು ದೇವಕೋಷ್ಠಗಳ ರಚನೆಯನ್ನು ಕಾಣಬಹುದು. ನವರಂಗದ ದ್ವಾರವನ್ನು ಸಹ ನಂತರ ಅವಧಿಯಲ್ಲಿ ಸೇರಿಸಿದ್ದಾಗಿದೆ.

ನವರಂಗಕ್ಕೆ ಹೊಂದಿಕೊಂಡಂತೆ ಪೂರ್ವದಿಕ್ಕಿನಲ್ಲಿ ವಿಶಾಲವಾದ ಮುಖಮಂಟಪ ರಚನೆ ಇದೆ. ಮಧ್ಯದಲ್ಲಿ ಅರ್ಧ ಅಡಿ ಎತ್ತರವಾದ ರಂಗವೇದಿಕೆ ಅದರ ಮೇಲೆ ನಾಲ್ಕು ಸ್ತಂಭಗಳಿಂದ ಕೂಡಿದ ಈ ಮುಖಮಂಟಪವು ತೆರೆದ ರಚನೆಯಾಗಿದ್ದು, ಸುತ್ತಲೂ ಅರ್ಧಗೋಡೆಯ ಮೇಲೆ ಕಕ್ಷಾಸನ ಅದರ ಹೊರಭಾಗದಲ್ಲಿ ಪದ್ಮಸಾಲು, ಸಂಗೀತ, ನೃತ್ಯಕಾರರ ಉಬ್ಬುಶಿಲ್ಪಗಳಿವೆ. ಪೂರ್ವ, ಉತ್ತರ ಮತ್ತು ಪಶ್ಚಿಮ ದಿಕ್ಕುಗಳಲ್ಲಿ ಪ್ರವೇಶವನ್ನು ಹೊಂದಿದೆ. ಚೌಕಾಕಾರದ ಮಧ್ಯ ವೇದಿಕೆಯ ಅಂಚಿನಲ್ಲಿರುವ ಸ್ತಂಭಗಳು ನವರಂಗದಲ್ಲಿರುವ ಸ್ತಂಬಗಳನ್ನು ಹೋಲುತ್ತವೆ. ಇಲ್ಲಿಯ ಸ್ತಂಭಗಳು ಪೀಠ, ದಂಡ, ತಡಿ, ಫಲಕ, ಬೋದಿಗೆಗಳನ್ನು ಹೊಂದಿದ್ದು ಎರಡು ಚೌಕಗಳ ಮಧ್ಯ 16 ಮತ್ತು 8 ಪಟ್ಟಿಕೆಗಳು ಅದರ ಮಧ್ಯ ವಜ್ರದ ಅಲಂಕರಣೆಯಿದೆ. ವಿತಾನ ಭಾಗವು ನವರಂಗದಂತೆ ಅಲಂಕೃತವಾದ ನಾಭಿಚ್ಛಂದ ರೀತಿಯಲ್ಲಿದ್ದು ಮಧ್ಯದಲ್ಲಿ ಪದ್ಮದ ಅಲಂಕರಣೆಯಿದೆ. ಕಕ್ಷಾಸನದ ಮೇಲೆ ನಿಂತ 14 ಕಿರು ಸ್ತಂಭಗಳು ವಿವಿಧ ಮಾದರಿಯಲ್ಲಿವೆ. ದಂಡ, ತಡಿ, ಬೋಧಿಗೆಗಳನ್ನು ಹೊಂದಿದ್ದು ದಂಡದ ತಳಭಾಗದ ಚೌಕಾಕಾರದ ಪಟ್ಟಿಕೆಯ ಮೇಲೆ 8 ಪಟ್ಟಿಕೆಗಳನ್ನು ಹೊಂದಿದ್ದ ಬಳೆಗಳ ರಚನೆ ಮತ್ತು ಕುಂಭ ಭಾಗದಲ್ಲಿ ಮುಗುಚಿ ಹಾಕಿದ ಪದ್ಮದ ಅಲಂಕರಣೆಯ ರಚನೆ, ಅದರ ಮೇಲೆ ಎಂಟು ಎಲೆಗಳ ರಚನೆಯನ್ನು ಕಾಣುತ್ತೇವೆ. ಮೂರು ದಿಕ್ಕಿನ ಪ್ರವೇಶಗಳಲ್ಲಿ ಸೋಪಾನಗಳಿದ್ದು, ಇಕ್ಕೆಲಗಳಲ್ಲಿ ಹಸ್ತಹಸ್ತಿಯ ರಚನೆಗಳನ್ನು ಗುರುತಿಸಬಹುದು. ದೇವಾಲಯದ ಮುಖಮಂಟಪವು ಶಿಥಿಲಾವಸ್ಥೆಯಲ್ಲಿದ್ದಾಗ ಅದನ್ನು ಜೀರ್ಣೋದ್ಧಾರಗೊಳಿಸಲಾಗಿದೆ. ಅಂತಹ ಸಂದರ್ಭದಲ್ಲಿ ಒಡೆದು ಹೋದ ಭಾಗಗಳನ್ನು ಹೊಸದಾಗಿ ಸೇರಿಸಲಾಗಿದೆ.

ದೇವಾಲಯದ ಹೊರಭಿತ್ತಿಯನ್ನು ಸಂಪೂರ್ಣವಾಗಿ ಜೀರ್ಣೋದ್ಧಾರ ಗೊಳಿಸಲಾಗಿದೆ. ಹಾಗಾಗಿ ಊರ್ಧ್ವಮುಖ ರಚನೆಗಳು ಕಂಡುಬರುವುದಿಲ್ಲ. ಆದರೆ ಸಭಾ ಮಂಟಪದಲ್ಲಿ ಮಾತ್ರ ಅಧಿಷ್ಠಾನ ಭಾಗವನ್ನು ಕಾಣಬಹುದು. ಉಪಾನ ನೆಲದಲ್ಲಿ ಹೂತು ಹೋಗಿದ್ದು ಜಗತಿ, ಕುಮುದ ಅದರ ಮೇಲೆ ಸ್ತರಗಳ ರೀತಿಯಲ್ಲಿ ಮೂರು ಪಟ್ಟಿಕೆಗಳ ರಚನೆಯಿದೆ. ಇಲ್ಲಿ ಆನೆಗಳ ಸಾಲು, ಪದ್ಮಸಾಲು ಹಾಗೂ ಸಂಗೀತ ಮತ್ತು ನೃತ್ಯಕಾರರ ಅಥವಾ ಮದನಿಕೆಯರ ಉಬ್ಬು ಶಿಲ್ಪಗಳನ್ನು ಒಳಗೊಂಡ ಪಟ್ಟಿಕೆಗಳ ರಚನೆಯನ್ನು ಕಾಣಬಹುದು. ಅಲ್ಲದೆ ಕಕ್ಷಾಸನದ ಹಿಂಭಾಗದಲ್ಲಿ ಅಲಂಕಾರಿಕವಾಗಿ ದ್ರಾವಿಡ ಮಾದರಿಯ ಚಿಕಣಿ ಶಿಲ್ಪಗಳು


Full text of this paper can be downloaded online https://www.thesocialsciencedialogue.com/archive

ಅವುಗಳ ಮಧ್ಯ ಸಿಂಹ ಮತ್ತು ಅದರ ಮೇಲ್ಭಾಗದ ಪಟ್ಟಿಕೆಯಲ್ಲಿ ಮದನಿಕೆಯರ ಮತ್ತು ವಲ್ಲಿ ಅಲಂಕಾರವನ್ನು ಕಾಣಬಹುದು. ಶೈವ ಮುನಿಯತಿಯ ಉಬ್ಬು ಶಿಲ್ಪವು ಕೂಡಾ ಪೂರ್ವಭಾಗದ ಕಕ್ಷಾಸನ ಹಿಂಬದಿಯಲ್ಲಿ ಕಂಡುಬರುತ್ತದೆ.

ಇನ್ನು ನವರಂಗದ ಎಡ ಭಾಗದಲ್ಲಿ ಹೊರಭಿತ್ತಿಯ ಪ್ರಾಚೀನ ಭಾಗ ಉಳಿದುಕೊಂಡಿದ್ದು ಅಧಿಷ್ಠಾನ ಮತ್ತು ಭಿತ್ತಿ ರಚನೆಗಳು ಕಂಡುಬರುತ್ತವೆ. ಅಧೀಷ್ಠಾನದಲ್ಲಿ ಉಪಾನ, ಜಗತಿ, ಕುಮುದ, ಕಪೋತ ಮತ್ತು ಪ್ರತಿ ಭಾಗಗಳು ಕಂಡುಬರುತ್ತವೆ. ಅಲ್ಲದೆ ಭಿತ್ತಿಯಲ್ಲಿ ಕುಡ್ಯ ಸ್ತಂಭಗಳಿದ್ದು ಅದರ ಮೇಲೆ ದ್ರಾವಿಡ ರಚನೆಯ ಚಿಕಣಿ ಶಿಲ್ಪಗಳಿವೆ. ಇದೇ ರೀತಿಯ ರಚನೆಯನ್ನು ದೇವಾಲಯದ ಹೊರಭಿತ್ತಿಯು ಹೊಂದಿತ್ತೆಂದು ತಿಳಿದುಬರುತ್ತದೆ.

ಈ ದೇವಾಲಯಕ್ಕೆ ಸುತ್ತಲೂ ಪ್ರಾಕಾರದ ರಚನೆಯಿದ್ದು ಪೂರ್ವಾಭಿಮುಖವಾಗಿ ಒಂದು ಪ್ರವೇಶದ್ವಾರವಿದೆ. ಇದು ಇತ್ತಿಚೀನ ನಿರ್ಮಾಣವಾಗಿದೆ. ಇದರ ಮೇಲಿರುವ ಮಕರ ತೋರಣ ಮಹತ್ವದ್ದಾಗಿದೆ. ಮಧ್ಯ ನಾಟ್ಯ ಭಂಗಿಯಲ್ಲಿರುವ ನಟರಾಜ, ಗಣೇಶ ಮತ್ತು ಕಾರ್ತಿಕೇಯನ ಶಿಲ್ಪಗಳಿದ್ದು ಅದರ ಮೇಲೆ ಕೀರ್ತಿಮುಖ ಮತ್ತು ಮಕರ ತೋರಣವನ್ನು ಕಾಣಬಹುದು.

**ಗ್ರಾಮ: ಜಮಖಂಡಿ** **ಹೆಸರು: ಕಲ್ಮೇಶ್ವರದೇವಾಲಯ**

**ಸ್ಥಳ: ನಗರದ ಮಧ್ಯ** **ಅಭಿಮುಖ: ಉತ್ತರಾಭಿಮುಖ**

**ಸ್ಥಿತಿ: ಉತ್ತಮ** **ಕಾಲ: ಕಲ್ಯಾಣ ಚಾಳುಕ್ಯ**

ಈ ದೇವಾಲಯವು ಕೂಡಾ ನಗರದ ಮಧ್ಯದಲ್ಲಿರುವ ಕೆರೆಯ ಹತ್ತಿರ ಕಂಡುಬರುತ್ತದೆ. ಉತ್ತರಾಭಿಮುಖವಾಗಿರುವ ಈ ದೇವಾಲಯತ್ರಿಕೂಟ ಮಾದರಿಯದ್ದಾಗಿದೆ. ಮೂರು ಗರ್ಭಗೃಹ, ಅದಕ್ಕೆ ಹೊಂದಿಕೊಂಡಂತೆ ತೆರೆದ ಅಂತರಾಳ, ಇವೆಲ್ಲವುಗಳು ಒಟ್ಟಿಗೆಕೂಡಿಸುವ ನವರಂಗ ಮತ್ತು ಮುಖಚತುಷ್ಕಿಯನ್ನು ಹೊಂದಿದೆ. ಪೂರ್ವಾಭಿಮುಖವಾಗಿರುವ ಗರ್ಭಗೃಹದಲ್ಲಿ ಶಿವಲಿಂಗವನ್ನು ಪ್ರತಿಷ್ಠಾಪಿಸಲಾಗಿದೆ. ಅದರದ್ವಾರವು ಚತುಶಾಖೆಗಳಿಂದ ಕೂಡಿದ್ದಾಗಿದ್ದು ವಜ್ರ, ವಲ್ಲಿ ಮತ್ತು ಸ್ತಂಭಶಾಖೆಗಳನ್ನು ಹೊಂದಿದೆ. ಇನ್ನೊಂದು ನೀರಲಂಕೃತವಾದ ಶಾಖೆಯಾಗಿದೆ. ಲಲಾಟದಲ್ಲಿ ಗಜಲಕ್ಷ್ಮೀಯ ಉಬ್ಬು ಶಿಲ್ಪವಿದೆ. ಉತ್ತರಾಂಗಭಾಗದಲ್ಲಿ ದ್ರಾವಿಡ ಮಾದರಿಯ ಚಿಕಣಿ ಶಿಲ್ಪಗಳನ್ನು ಕಾಣಬಹುದು. ಪೇದ್ಯಾ ಭಾಗವು ನೀರಲಂಕೃತವಾಗಿದ್ದು ಹೊಸ್ತಿಲ ಭಾಗದಲ್ಲಿ ಪದ್ಮದ ಅಲಂಕರಣೆಯಿದೆ. ಗರ್ಭಗೃಹ ಮತ್ತು ಅಂತರಾಳದ ವಿತಾನದಲ್ಲಿ ನಾಭಿಚ್ಛಂದ ಅಲಂಕರಣೆಯನ್ನು ಕಾಣಬಹುದು ಉಳಿದ ಮತ್ತೆರಡು ಗರ್ಭಗೃಹಗಳು ಇದೇ ರೀತಿಯ ಲಕ್ಷಣಗಳನ್ನು ಹೊಂದಿದ್ದು ಯಾವುದೇ ಭಿನ್ನತೆಗಳು ಕಂಡುಬರುವುದಿಲ್ಲ. ಆದರೆ ಪೂರ್ವಾಭಿಮುಖವಾಗಿರುವ ಗರ್ಭಗೃಹದಲ್ಲಿ ಇತ್ತೀಚಿನ ಶಿವಲಿಂಗವನ್ನು ಪ್ರತಿಷ್ಠಾಪಿಸಲಾಗಿದೆ. ಇದೇ ಗರ್ಭಗೃಹದ ದ್ವಾರಶಾಖೆಯ ಹೊಸ್ತಿಲು ಭಾಗದ ಎಡ ಅಂಚಿನಲ್ಲಿ ಚಿಕ್ಕಕೋಷ್ಠದಲ್ಲಿ ಶೈವ ಮುನಿ ಶಿಲ್ಪವಿದೆ. ಜೊತೆಗೆ ಪಶ್ಚಿಮಾಭಿಮುಖವಾದ ಅಂತರಾಳದಲ್ಲಿ ಮಾತ್ರ ಎಡಭಾಗದಲ್ಲಿ ಒಂದು ದೇವಕೋಷ್ಠಕವನ್ನು ಕಾಣಬಹುದು. ತೆರೆದ ಅಂತರಾಳಗಳ ಪ್ರವೇಶದ ಇಕ್ಕೆಲಗಳಲ್ಲಿ ಕೆಳಗೆ ಚೌಕ, ಮಧ್ಯ ವೃತ್ತಾಕಾರವಾಗಿರುವ ರುದ್ರಚ್ಛಂದವನ್ನು ಹೋಲುವ ಸ್ತಂಭಗಳಿವೆ. ಅದು ಚೌಕಾಕಾರದ ಪೀಠ, ವೃತ್ತಾಕಾರದಲ್ಲಿ ದಂಡ, ತಡಿ, ಫಲಕ, ಬೋದಿಗೆಗಳನ್ನು ಹೊಂದಿದೆ. ಮೂರು ಅಂತರಾಳಗಳಲ್ಲಿ ಇದೇ ರೀತಿಯ ರಚನೆಯ ಸ್ತಂಭಗಳಿವೆ.


Full text of this paper can be downloaded online https://www.thesocialsciencedialogue.com/archive

ನವರಂಗ ಭಾಗದ ಮಧ್ಯದಲ್ಲಿ ಅರ್ಧ ಅಡಿ ಎತ್ತರದ ವೇದಿಕೆಯ ಮೂಲೆ ಭಾಗಗಳಲ್ಲಿ ನಾಲ್ಕು ಸ್ತಂಭಗಳಿವೆ. ಅವು ಪೀಠ, ದಂಡ, ತಡಿ, ಫಲಕ ಮತ್ತು ಬೋದಿಗೆಗಳನ್ನು ಹೊಂದಿವೆ. ದಂಡ ಭಾಗದಲ್ಲಿ ಎರಡು ಚೌಕಗಳ ಮಧ್ಯ ವೃತ್ತಾಕಾರವಾಗಿ 16 ಮತ್ತು 8 ಪಟ್ಟಿಕೆಗಳನ್ನು ಹೊಂದಿದೆ. ವಿತಾನದ ಮಧ್ಯದಲ್ಲಿ ನಾಭಿಚ್ಛಂದವಿದ್ದು ಮಧ್ಯ ಪದ್ಮದಳ ಮತ್ತು ಅದರ ಮಧ್ಯ ಕದಳಿ ರೀತಿಯ ಮುಂಚಾಚನ್ನು ಹೊಂದಿದೆ. ಅಲ್ಲದೆ ನವರಂಗದ ಒಳಭಿತ್ತಿಯಲ್ಲಿ 8 ದೇವಕೋಷ್ಠಗಳಿದ್ದು ಅವುಗಳ ಮೇಲೆ ದ್ರಾವಿಡ ಮಾದರಿಯ ಚಿಕಣಿ ಶಿಖರದ ರಚನೆಯನ್ನು ಕಾಣಬಹುದು. ಈ ದೇವಕೋಷ್ಠಗಳಲ್ಲಿ ತೃಟಿತ ಸಪ್ತಮಾತೃಕೆ, ನಾಗ, ಇನ್ನಿತರ ಇತ್ತೀಚಿನ ಶಿಲ್ಪಗಳನ್ನು ಇಡಲಾಗಿದೆ.

ನವರಂಗದಲ್ಲಿ ಅಲಂಕಾರಿಕ 12 ಭದ್ರತಾ ಸ್ತಂಭಗಳಿದ್ದು ಅವು ಹೊರ ಭಾಗದಲ್ಲಿ ಪೀಠ, ದಂಡ, ತಡಿ, ಫಲಕ ಮತ್ತು ಬೋದಿಗೆ ರೀತಿಯ ರಚನೆಯನ್ನು ಹೊಂದಿವೆ. ನವರಂಗದ ಮಧ್ಯಭಾಗದಲ್ಲಿ ಇತ್ತೀಚೀನ ನಂದಿ ಶಿಲ್ಪವನ್ನು ಪ್ರತಿಷ್ಠಾಪಿಸಲಾಗಿದೆ. ಮುಖಚತುಷ್ಕಿಯ ಎರಡು ಬದಿಗೆ ಕಕ್ಷಾಸನಗಳು, ಕಕ್ಷಾಸನದ ವೇದಿಕೆಯ ಮೇಲೆ ವೃತ್ತಾಕಾರದ ರುದ್ರಚ್ಛಂದವನ್ನು ಹೋಲುವ ಕಿರು ಸ್ತಂಭಗಳಿವೆ. ಜಮಖಂಡಿಯಲ್ಲಿ ಕಂಡುಬರುವ ಎಲ್ಲ ದೇವಾಲಯಗಳಿಗಿಂತ ಇದು ಪ್ರಾಚೀನ ದೇವಾಲಯವಾಗಿದೆ ಎಂಬುದು ದೇವಾಲಯದ ಲಕ್ಷಣಗಳ ಆಧಾರದ ಮೇಲೆ ತಿಳಿದು ಬರುತ್ತದೆ. ಪ್ರಸ್ತುತ ಕಕ್ಷಾಸನದ ಮೇಲೆ ಗೋಡೆಗಳನ್ನು ನಿರ್ಮಿಸಿ, ಮುಖ ಚತುಷ್ಕಿಗೆ ದ್ವಾರವನ್ನು ಕೂಡಿಸಿದ್ದಾರೆ.

ದೇವಾಲಯದ ಮುಕ್ಕಾಲು ಭಾಗವು ನೆಲದಲ್ಲಿ ಹುಗಿದಿರುವುದರಿಂದ ಊರ್ಧ್ವಮುಖ ವಿನ್ಯಾಸ ಅಥವಾ ಹೊರವಿನ್ಯಾಸ ಸ್ಪಷ್ಟವಾಗಿ ಕಂಡುಬರುವುದಿಲ್ಲ. ಇನ್ನು ವಿಮಾನ ಭಾಗವು ಸಂಪೂರ್ಣವಾಗಿ ನಾಶ ಹೊಂದಿದೆ. ದೇವಾಲಯದ ಪಶ್ಚಿಮ ಮತ್ತು ದಕ್ಷಿಣ ಭಾಗದಲ್ಲಿ ಮಾತ್ರ ಅರ್ಧ ತೆರೆದುಕೊಂಡಿರುವ ಭಿತ್ತಿ ಕಂಡುಬರುತ್ತದೆ. ಇದರ ಆಧಾರದ ಮೇಲೆ ಕರ್ಣ ಮತ್ತು ಮಧ್ಯ ಭದ್ರಭಾಗಗಳು ಮುಂಚಾಚಿಕೊಂಡಿದ್ದು ಇದರ ಮಧ್ಯ ಸಲಿಲಾಂತರಗಳ ರಚನೆ ಇದೆ. ಭಿತ್ತಿ ಭಾಗದಲ್ಲಿ ಕಂಡುಬರುವ ಭಿತ್ತಿಪಾದಗಳ (ಕುಡ್ಯಸ್ತಂಭಗಳ) ರಚನೆಗಳಿಂದ ಹೆಚ್ಚು ಅಲಂಕೃತವಾಗಿ ಕಂಡುಬರುತ್ತದೆ. ಇವು ಆಕಾರದಲ್ಲಿ ದೇವಾಲಯದ ನವರಂಗದ ಸ್ತಂಭಗಳನ್ನು ಹೋಲುತ್ತವೆ. ಅಲ್ಲದೆ ಭಿತ್ತಿಯ ಮಧ್ಯ ಭಾಗದಲ್ಲಿ ಸ್ತಂಭಿಕೆಗಳನ್ನು ಕೆತ್ತಿಅದರ ಮೇಲೆ ದ್ರಾವಿಡ ಪ್ರಾಸಾದ ಮಾದರಿಯಚಿಕಣಿ ಶಿಲ್ಪಗಳನ್ನು ಕೆತ್ತಿರುವುದನ್ನು ಕಾಣಬಹುದು. ಪ್ರಸ್ತರ ಭಾಗದಲ್ಲಿ ಉತ್ತರ ಮತ್ತು ಕಪೋತ ಭಾಗಗಳನ್ನು ಕಾಣಬಹುದು. ಅದರ ಮೇಲೆ ಹಾರ ಅಥವಾ ಶಿಖರ ಭಾಗಗಳು ಇಂದು ಕಂಡುಬರುವುದಿಲ್ಲ. ಇದೇ ರೀತಿಯ ರಚನೆ ದೇವಾಲಯದ ಉಳಿದ ಭಾಗವು ಹೊಂದಿತ್ತು ಎಂದು ಹೇಳಬಹುದು.

**ಗ್ರಾಮ: ಜಮಖಂಡಿ** **ಹೆಸರು: ಪ್ರಭುಲಿಂಗೇಶ್ವರದೇವಾಲಯ**

**ಸ್ಥಳ: ನಗರದ ಮಧ್ಯ** **ಅಭಿಮುಖ: ದಕ್ಷಿಣಾಭಿಮುಖ**

**ಸ್ಥಿತಿ: ಉತ್ತಮ** **ಕಾಲ: ಕಲ್ಯಾಣ ಚಾಳುಕ್ಯ**

ಪ್ರಭುಲಿಂಗೇಶ್ವರ ಎಂದು ಕರೆಯಲ್ಪಡುವ ಈ ದೇವಾಲಯವು ದಕ್ಷಿಣಾಭಿಮುಖವಾಗಿ ನಿರ್ಮಾಣವಾದ ತ್ರೈಪುರುಷ ದೇವಾಲಯವಾಗಿದೆ. ಈ ದೇವಾಲಯವು ಕೂಡಾ ನಗರದ ಮಧ್ಯ ಇರುವ ಕೆರೆಯ ಹತ್ತಿರಕಂಡು ಬರುತ್ತದೆ. ಇದು ತ್ರಿಕೂಟ ಮಾದರಿಯ ದೇವಾಲಯವಾಗಿದ್ದು ಮೂರು ಗರ್ಭಗೃಹ, ಜಾಲಂಧ್ರ ವಿನ್ಯಾಸವುಳ್ಳ ಮೂರು ಅಂತರಾಳ, ನವರಂಗ ಭಾಗಗಳನ್ನು ಹೊಂದಿದೆ. ಪ್ರಸ್ತುತದೇವಾಲಯದ ಸುತ್ತಲು ಮನೆಗಳು ನಿರ್ಮಾಣವಾಗಿರುವುದರಿಂದ ಇಂದು ನೆಲದಲ್ಲಿ


Full text of this paper can be downloaded online https://www.thesocialsciencedialogue.com/archive

ಹುಗಿದಿರುವ ಹಾಗೆ ಕಂಡುಬರುತ್ತದೆ. ಹಾಗಾಗಿ ದೇವಾಲಯದ ಹೊರ ಭಾಗದ ಯಾವುದೇ ಲಕ್ಷಣಗಳು ನಮಗೆ ಕಾಣಿಸುವುದಿಲ್ಲ. ಪೂರ್ವಾಭಿಮುಖವಾಗಿರುವ ಗರ್ಭಗೃಹದ ದ್ವಾರವು ತ್ರಿಶಾಖೆಗಳನ್ನು ಹೊಂದಿದ್ದು ವಜ್ರ, ವಲ್ಲಿ ಮತ್ತು ಸ್ತಂಭಶಾಖೆಗಳಾಗಿವೆ. ಲಲಾಟದಲ್ಲಿ ಗಜಲಕ್ಷ್ಮೀಯ ಉಬ್ಬು ಶಿಲ್ಪವಿದೆ. ಉತ್ತರಾಂಗ ಭಾಗದಲ್ಲಿ ಪದ್ಮದಳಗಳ ಅಲಂಕರಣವಿದೆ. ಮಧ್ಯದಲ್ಲಿ ಯಾವುದೇ ಶಿಲ್ಪವಿಲ್ಲ. ಅಂತರಾಳಕ್ಕೆ ಜಾಲಂಧ್ರ ವಿನ್ಯಾಸವನ್ನು ಅಳವಡಿಸಿದ್ದು ಅದರ ಮೇಲ್ಭಾಗದಲ್ಲಿ ಮಕರ ತೋರಣದ ಅಲಂಕಾರವಿದೆ. ಪಶ್ಚಿಮಾಭಿಮುಖವಾಗಿರುವ ಗರ್ಭಗೃಹವು ಇದೇ ಲಕ್ಷಣಗಳನ್ನು ಹೊಂದಿದೆ. ಆದರೆ ಪೂರ್ವಾಭಿಮುಖವಾಗಿರುವ ಮಕರ ತೋರಣದಲ್ಲಿ ಸ್ಥಾನಿಕ ಭಂಗಿಯಲ್ಲಿ ಶಂಖ, ಚಕ್ರ, ಗದೆಗಳನ್ನು ಹಿಡಿದ ಮತ್ತು ಅಭಯ ಮುದ್ರೆಯಲ್ಲಿರುವ ವಿಷ್ಣುವಿನ ಶಿಲ್ಪವಿದ್ದು ಇದು ವಿಷ್ಣುವಿಗೆ ಸಂಬಂಧಿಸಿದ ಗರ್ಭಗೃಹ ಎಂದು ತಿಳಿದು ಬರುತ್ತದೆ. ಅದೇ ರೀತಿ ಪಶ್ಚಿಮಾಭಿಮುಖವಾಗಿರುವ ಅಂತರಾಳದ ಮೇಲಿನ ಮಕರ ತೋರಣದ ಮಧ್ಯಡಮರು, ತ್ರಿಶೂಲಗಳನ್ನು ಹಿಡಿದಿರುವ ಅಭಯ ಮುದ್ರೆಯನ್ನು ಹೊಂದಿರುವ ನಾಟ್ಯ ಭಂಗಿಯಲ್ಲಿರುವ ನಟರಾಜನ ಶಿಲ್ಪವಿದ್ದು ಶಿವನಿಗೆ ಸಂಬಂಧಿಸಿದ ಗರ್ಭಗೃಹವಾಗಿದೆ. ದಕ್ಷಿಣಾಭಿಮುಖವಾಗಿರುವ ಗರ್ಭಗೃಹವನ್ನು ಮತ್ತು ಅದರ ಅಂತರಾಳವನ್ನು ಟೈಲ್ಸ್ ಹಾಕಿದ್ದರಿಂದ ಯಾವುದೇ ಅಲಂಕಾರಗಳು ಕಂಡುಬರುವುದಿಲ್ಲ. ಆದರೆ ಲಲಾಟದಲ್ಲಿ ಗಜಲಕ್ಷ್ಮಿ ಶಿಲ್ಪವಿದ್ದು ತೃಟಿತಗೊಂಡಿದೆ. ಉತ್ತರಾಂಗಭಾಗದಲ್ಲಿ ಪದ್ಮದಳ ಅಲಂಕಾರವಿದೆ. ಇದರ ಅಂತರಾಳದ ಮುಂಭಾಗದಲ್ಲಿಯೂ ಸಹ ಮಕರ ತೋರಣವಿದ್ದು ಈ ತೋರಣದ ಮಧ್ಯ ಸ್ಥಾನಿಕ ಭಂಗಿಯಲ್ಲಿ ಕೈಯಲ್ಲಿ ಮೊಗ್ಗುಗಳನ್ನು ಹಿಡಿದುಕೊಂಡಿರುವ ಸೂರ್ಯ ಶಿಲ್ಪವಿದ್ದು ಅದರ ಮೇಲೆ ಕೀರ್ತಿಮುಖ ಮತ್ತು ಸುತ್ತಲೂ ತೋರಣದ ಅಲಂಕರಾವಿದೆ. ಈ ಗರ್ಭಗೃಹದಲ್ಲಿ ಇತ್ತೀಚಿಗೆ ಪ್ರತಿಷ್ಠಾಪಿಸಲ್ಪಟ್ಟ ಶಿವಲಿಂಗವಿದೆ. ಒಟ್ಟಾರೆ ಈ ದೇವಾಲಯದಲ್ಲಿ ಮಧ್ಯ ಸೂರ್ಯ ಇಕ್ಕೆಲಗಳಲ್ಲಿ ವಿಷ್ಣು ಮತ್ತು ಶಿವನಿಗೆ ಸಂಬಂಧಿಸಿದ ಗರ್ಭಗೃಹಗಳಿದ್ದು ತ್ರೈಪುರುಷದೇವಾಲಯ ಎಂದು ಹೇಳಬಹುದು.

ನವರಂಗದ ಭಾಗದಲ್ಲಿ ನಾಲ್ಕು ಸ್ತಂಭಗಳಿದ್ದು ಅವು ಪೀಠ, ದಂಡ, ತಡಿ, ಫಲಕ, ಬೋದಿಗೆಗಳನ್ನು ಹೊಂದಿದೆ. ಎರಡು ಚೌಕಗಳ ಮಧ್ಯಎಂಟು ಪಟ್ಟಿಕೆ ಮತ್ತು ವೃತ್ತಾಕಾರದ ಬಳೆಗಳ ರಚನೆಗಳಿವೆ. ವಿತಾನದಲ್ಲಿ ನಾಭಿಚ್ಛಂದವಿದ್ದು ಮಧ್ಯದಲ್ಲಿ ಪದ್ಮ ಅದರ ಮಧ್ಯ ಮುಕುಳವನ್ನು ಅಲಂಕಾರಿಕವಾಗಿ ಕೆತ್ತಲಾಗಿದೆ. ನವರಂಗದ ಭಿತ್ತಿಯಲ್ಲಿ ಒಟ್ಟು 8 ದೇವಕೋಷ್ಠಗಳಿದ್ದು ಅವುಗಳ ಮೇಲೆ ದ್ರಾವಿಡ ಮಾದರಿಯ ಚಿಕಣಿ ಶಿಖರ ಮಾದರಿಗಳಿವೆ. ಉಳಿದಂತೆ ದೇವಕೋಷ್ಠದ ಇಕ್ಕೆಲಗಳು ಸ್ತಂಭಗಳಿಂದ ಕೂಡಿದ್ದು ಒಂದು ದೇವಾಲಯದ ವಿನ್ಯಾಸವನ್ನು ತೋರಿಸಿ ಕೊಡುತ್ತವೆ. ದೇವಾಲಯದ ಒಳಭಿತ್ತಿಯಲ್ಲಿರುವ ಭದ್ರತಾ ಸ್ತಂಭಗಳು ಅಲಂಕಾರಿಕವಾಗಿಲ್ಲ.

ದೇವಾಲಯದ ಹೊರ ಭಾಗ ಸಂಪೂರ್ಣವಾಗಿ ನೆಲದಲ್ಲಿ ಹುಗಿದಿರುವುದರಿಂದ ಯಾವುದೇ ಲಕ್ಷಣಗಳು ಕಂಡುಬರುವುದಿಲ್ಲ. ಶಿಖರ ಅಥವಾ ಪ್ರಾಸಾದ ಬಿದ್ದು ಹೋಗಿದೆ. ನವರಂಗದ ಪ್ರವೇಶದ ಲಲಾಟದಲ್ಲಿ ಗಣೇಶನ ಉಬ್ಬು ಶಿಲ್ಪವಿರುವ ದ್ವಾರವನ್ನು ನಂತರ ಅವಧಿಯಲ್ಲಿ ಸೇರ್ಪಡೆ ಮಾಡಲಾಗಿದೆ. ಅಲ್ಲಿ ಯಾವುದೇ ದ್ವಾರಶಾಖೆಗಳು ಇರುವುದಿಲ್ಲ. ದೇವಾಲಯದ ಲಕ್ಷಣಗಳ ಆಧಾರದ ಮೇಲೆ ಇದು ಕಲ್ಯಾಣ ಚಾಳುಕ್ಯ ಅವಧಿಯಲ್ಲಿ ನಿರ್ಮಾಣವಾದದ್ದು ಎಂದು ಅಭಿಪ್ರಾಯಿಸಬಹುದು.

**ಗ್ರಾಮ: ಜಮಖಂಡಿ** **ಹೆಸರು: ನಂದಿಕೇಶ್ವರ ದೇವಾಲಯ**

**ಸ್ಥಳ: ಕುಂಬಾರಗಲ್ಲಿ** **ಅಭಿಮುಖ: ಉತ್ತರಾಭಿಮುಖ**

**ಸ್ಥಿತಿ: ಉತ್ತಮ** **ಕಾಲ: ಕಲ್ಯಾಣ ಚಾಳುಕ್ಯ**

ಜಮಖಂಡಿ ನಗರದ ಪೂರ್ವಕ್ಕೆ ಜಮಖಂಡಿಯಿಂದ ಮುಧೋಳಗೆ ಹೋಗುವ ರಸ್ತೆಯ ಹತ್ತಿರ ಇದು ಕಂಡುಬರುತ್ತದೆ. ಉತ್ತರಾಭಿಮುಖವಾಗಿರುವ ತ್ರಿಕೂಟ ದೇವಾಲಯವಾಗಿದ್ದು ಪ್ರಸ್ತುತ ಅದು ದ್ವಿಕೂಟದೇವಾಲಯದಂತೆ ಕಂಡುಬರುತ್ತದೆ. ಈಗ ಪಶ್ಚಿಮಾಭಿಮುಖ ಮತ್ತು ಪೂರ್ವಾಭಿಮುಖವಾಗಿರುವ ಗರ್ಭಗೃಹಗಳು ಮಾತ್ರ ಉಳಿದುಕೊಂಡಿದ್ದು. ಉತ್ತರಾಭಿಮುಖ ಗರ್ಭಗೃಹವನ್ನು ಸಂಪೂರ್ಣವಾಗಿ ತೆಗೆದು ಹಾಕಿ ಅಲ್ಲಿ ಗೋಡೆಯನ್ನು ನಿರ್ಮಿಸಿದ್ದಾರೆ. ಉಳಿದೆರಡು ಗರ್ಭಗೃಹಗಳ ಮುಂಭಾಗದಲ್ಲಿರುವ ಅಂತರಾಳಗಳ ಇಕ್ಕೆಲಗಳಲ್ಲಿರುವ ಭಿತ್ತಿಯನ್ನು ಒಡೆದು ಅಲ್ಲಿ ದ್ವಾರವನ್ನು ಸೇರಿಸಿ ಉತ್ತರಾಭಿಮುಖ ಮತ್ತು ದಕ್ಷಿಣಾಭಿಮುಖವಾಗಿ ಮತ್ತೇರಡು ಗರ್ಭಗೃಹಗಳನ್ನು ನಂತರದ ಕಾಲಘಟ್ಟದಲ್ಲಿ ನಿರ್ಮಿಸಲಾಗಿದೆ. ಹೀಗಾಗಿ ಆ ಎರಡು ಗರ್ಭಗೃಹಗಳಿಗೆ ಹೊಂದಿಕೊಂಡಂತೆ ಮತ್ತೇರೆಡೆರಡು ಗರ್ಭಗೃಹಗಳು ಕಂಡುಬರುತ್ತವೆ.

ಪೂರ್ವಾಭಿಮುಖವಾಗಿರುವ ಗರ್ಭಗೃಹದ ಮಧ್ಯದಲ್ಲಿ ಇತ್ತಿಚೀನ ಶಿವಲಿಂಗವಿದ್ದು ಒಳ ಭಿತ್ತಿಯ ಮೂರು ಭಾಗಗಳಲ್ಲಿ ಮಧ್ಯದಲ್ಲಿ ಅರ್ಧ ಅಡಿ ಅಗಲದ ಕಲ್ಲು ಫಳಿಗಳು ಮುಂಚಾಚಿವೆ. ಇದರ ದ್ವಾರವು ಚತುಶಾಖೆಗಳಿಂದ ಕೂಡಿದ್ದು ವಜ್ರ, ವಲ್ಲಿ, ಸ್ತಂಭ ಮತ್ತು ಸಿಂಹಶಾಖೆಗಳನ್ನು ಹೊಂದಿದೆ. ಸ್ತಂಭಶಾಖೆಯು ಮುಂದುವರೆದು ಕಪೋತದಂತೆ ಮುಂಚಾಚಿರುವ ಭಾಗಕ್ಕೆ ಹೊಂದಿಕೊಂಡಿದೆ. ಇದರ ಲಲಾಟದಲ್ಲಿ ನರಸಿಂಹನ ಉಬ್ಬು ಶಿಲ್ಪವಿದೆ. ಹಾಗಾಗಿ ಇದೊಂದು ವಿಷ್ಣುವಿಗೆ ಸಂಬಂಧಿಸಿದ ಗರ್ಭಗೃಹವೆಂದು ಹೇಳಬಹುದು. ಅದರ ಉತ್ತರಾಂಗ ಭಾಗದಲ್ಲಿ ರೇಖಾನಾಗರ ಶೈಲಿಯ ಚಿಕಣಿ ಮಾದರಿಗಳು ಮತ್ತು ಅದರ ಮಧ್ಯ ಸಿಂಹಗಳ ಉಬ್ಬು ಶಿಲ್ಪಗಳಿವೆ. ಈ ಹಿಂದೆ ವಿವರಿಸಿದ ಹಾಗೆ ಈ ಗರ್ಭಗೃಹದ ಮುಂಭಾಗದಲ್ಲಿ ಅಂತರಾಳಕ್ಕೆ ಹೊಂದಿಕೊಂಡು ನಂತರದ ಅವಧಿಯಲ್ಲಿ ಮತ್ತೇರಡು ಗರ್ಭಗೃಹಗಳನ್ನು ರಚಿಸಿದ್ದಾರೆ. ಇದರ ಉತ್ತರಾಭಿಮುಖ ಗರ್ಭಗೃಹದಲ್ಲಿ ಸಪ್ತಮಾತೃಕೆಯ ಶಿಲ್ಪವಿದೆ. ಅಂತರಾಳದ ಪ್ರವೇಶದ ಇಕ್ಕೆಲಗಳಲ್ಲಿ ವೃತ್ತಾಕಾರದ ಎರಡು ಸ್ತಂಭಗಳಿದ್ದು ಚೌಕ, ದಂಡ, ತಡಿ, ಫಲಕ, ಬೋದಿಗೆಗಳನ್ನು ಹೊಂದಿವೆ.

ಅದೇ ರೀತಿ ಪಶ್ಚಿಮಾಭಿಮುಖವಾಗಿರುವ ಮತ್ತೊಂದು ಗರ್ಭಗೃಹದ ಮಧ್ಯಗಾತ್ರದಲ್ಲಿ ಸ್ವಲ್ಪದೊಡ್ಡದಾದ ನಂದಿಶಿಲ್ಪವನ್ನು ಇಡಲಾಗಿದೆ. ಹಾಗಾಗಿ ಈ ದೇವಸ್ಥಾನಕ್ಕೆ ನಂದಿಕೇಶ್ವರ ದೇವಾಲಯವೆಂದು ಕರೆಯುತ್ತಾರೆ. ಗರ್ಭಗೃಹದ ಒಳಭಿತ್ತಿಯಲ್ಲಿ ಮೂರು ಭಾಗದಲ್ಲಿ ಅರ್ಧ ಅಡಿ ಮುಂಚಾಚಿರುವ ಕಲ್ಲಿನ ಫಳಿಯ ರಚನೆಯಿದೆ. ಇದರ ದ್ವಾರವು ಸಹ ತ್ರಿಶಾಖೆಗಳನ್ನು ಹೊಂದಿದ್ದು ಅದು ವಜ್ರ, ವಲ್ಲಿ, ಸ್ತಂಭ ಶಾಖೆಗಳಾಗಿವೆ. ಲಲಾಟದಲ್ಲಿ ಗಜಲಕ್ಷ್ಮೀ ಶಿಲ್ಪವಿದೆ. ಉತ್ತರಾಂಗಭಾಗದಲ್ಲಿ ದ್ರಾವಿಡ ಮಾದರಿಯ ಚಿಕಣಿ ಶಿಲ್ಪಗಳಿದ್ದು ಹೊಸ್ತಿಲದಲ್ಲಿ ಪದ್ಮದ ಅಲಂಕರಣೆಗಳಿವೆ. ಪೇದ್ಯಾ ಭಾಗದಲ್ಲಿ ಯಾವುದೇ ಅಲಂಕರಣೆಗಳು ಇರುವುದಿಲ್ಲ. ಈ ಗರ್ಭಗೃಹಕ್ಕೆ ಹೊಂದಿಕೊಂಡಂತೆ ಅಂತರಾಳ ಭಾಗದ ಎರಡು ಭಿತ್ತಿಗಳನ್ನು ತೆಗೆದು ಮತ್ತೆರಡು ಗರ್ಭಗೃಹಗಳನ್ನು ಇಲ್ಲಿಯೂ ನಿರ್ಮಿಸಲಾಗಿದೆ. ಇವು ನಂತರ ಕಾಲಘಟ್ಟದಲ್ಲಿ ಸೇರ್ಪಡೆಗೊಂಡಿವೆ. ಈ ಗರ್ಭಗೃಹಗಳ



Full text of this paper can be downloaded online https://www.thesocialsciencedialogue.com/archive

ದ್ವಾರವನ್ನು ಜಾಲಂಧ್ರದ ರೀತಿ ವಿನ್ಯಾಸ ಮಾಡಿದ್ದಾರೆ. ಇವುಗಳ ದ್ವಾರದ ಮೇಲ್ಭಾಗದಲ್ಲಿ ಮಕರ ತೋರಣಗಳ ಅಲಂಕಾರಗಳಿವೆ.

ನವರಂಗದ ಭಾಗದರಂಗ ವೇದಿಕೆಯನ್ನು ಮುಚ್ಚಿಅದರ ಮೇಲೆ ಟೈಲ್ಸ್ ಹಾಕಲಾಗಿದೆ. ನವರಂಗದ ಮಧ್ಯದ ಸ್ತಂಭಗಳು ಪೀಠ, ದಂಡ, ತಡಿ, ಫಲಕ ಭೋದಿಗೆಗಳನ್ನು ಹೊಂದಿದ್ದು ಎರಡು ಚೌಕಗಳ ಮಧ್ಯ 16 ಮತ್ತು 8 ಪಟ್ಟಿಕೆಗಳ ರಚನೆಗಳಿದ್ದು ಅದರ ಮಧ್ಯ ವಜ್ರದ ಅಲಂಕರಣೆಗಳಿವೆ. ನವರಂಗದ ಭದ್ರತಾ ಸ್ತಂಭಗಳನ್ನು ಅಲಂಕಾರಿಕವನ್ನಾಗಿ ಮಾಡಿದ್ದಾರೆ. ಮತ್ತು ಒಳ ಭಿತ್ತಿಯಲ್ಲಿ ದೇವಕೋಷ್ಠಗಳಿದ್ದು ಅದರ ಮೇಲೆ ದ್ರಾವಿಡ ಮಾದರಿಯ ರಚನೆಗಳಿವೆ. ಇದೇ ನವರಂಗದ ಈಶಾನ್ಯ ಭಾಗದಲ್ಲಿ ನಂತರ ಅವಧಿಯಲ್ಲಿ ದೇವಾಲಯದ ವಸ್ತುಗಳನ್ನು ಇಡಲು ಒಂದು ಕೋಠಡಿಯನ್ನು ನಿರ್ಮಿಸಿದ್ದು ಅದರ ದ್ವಾರವು ಪ್ರಾಚೀನ ಕಾಲಘಟ್ಟದ್ದಾಗಿದೆ. ಅಂದರೆ ಇಲ್ಲಿ ಮತ್ತೊಂದು ಗರ್ಭಗೃಹದದ್ವಾರವನ್ನು ತೆಗೆದು ಅದಕ್ಕೆ ಸೇರಿಸಲಾಗಿದೆ. ಇದು ಮೂರು ಶಾಖೆಗಳನ್ನು ಹೊಂದಿದ್ದು ವಜ್ರ, ವಲ್ಲಿ ಮತ್ತು ಸ್ತಂಭಶಾಖೆಗಳಿವೆ ಲಲಾಟದಲ್ಲಿ ಸ್ಥಾನಿಕ ಭಂಗಿಯಲ್ಲಿ ಶಂಖ, ಚಕ್ರ, ಗದೆ ಹಿಡಿದಿರುವ ಮತ್ತು ಅಭಯ ಮುದ್ರೆಯಲ್ಲಿ ನಿಂತ ವಿಷ್ಣುವಿನ ಶಿಲ್ಪವಿದೆ.

ದೇವಾಲಯದ ಮುಖ ಮಂಟಪವನ್ನು ಜೀರ್ಣೋದ್ಧಾರಗೊಳಿಸಿದ್ದರು ಸಹ ಅದಕ್ಕೆ ಪ್ರಾಚೀನದ್ವಾರವನ್ನು ಸೇರಿಸಲಾಗಿದೆ. ಇದುಕೂಡಾ ತ್ರಿಶಾಖೆಯನ್ನು ಹೊಂದಿದ್ದು ವಜ್ರ, ವಲ್ಲಿ, ಸ್ತಂಭ ಶಾಖೆಗಳು ಕಂಡುಬರುತ್ತವೆ. ಲಲಾಟದಲ್ಲಿ ಗಜಲಕ್ಷ್ಮೀ ಶಿಲ್ಪವಿದೆ. ಉತ್ತರಾಂಗ ಭಾಗದಲ್ಲಿ ರೇಖಾನಾಗರ ಮಾದರಿಯ ಚಿಕಣಿ ಶಿಲ್ಪಗಳಿದ್ದು, ಮಧ್ಯ ಸಿಂಹ ಶಿಲ್ಪಗಳಿವೆ. ದ್ವಾರದ ಉತ್ತರಾಂಗಭಾಗದಲ್ಲಿ ಇರುವರೇ ಖಾನಾಗರ ಮಾದರಿಯ ಚಿಕಣಿ ಶಿಲ್ಪಗಳಿದ್ದ ಭಾಗವನ್ನು ಹಾಕಿ ಹೊಸ್ತಿಲನ್ನಾಗಿ ಮಾಡಿಕೊಂಡಿದ್ದಾರೆ. ದೇವಾಲಯ ಬಹುತೇಕ ಜೀರ್ಣೋದ್ಧಾರಗೊಂಡಿರುವುದರಿಂದ ಮೂಲ ಲಕ್ಷಣಗಳು ಗೊಂದಲಕ್ಕೆ ಎಡೆಮಾಡಿಕೊಡುತ್ತವೆ. ಇಲ್ಲಿಒಟ್ಟು ನಾಲ್ಕು ದ್ವಾರಶಾಖೆಗಳಿದ್ದು ಎರಡರಲ್ಲಿ ನರಸಿಂಹ ಮತ್ತು ವಿಷ್ಣುವಿನ ಉಬ್ಬು ಶಿಲ್ಪಗಳಿದ್ದು ಉಳಿದೆರಡರಲ್ಲಿ ಗಜಲಕ್ಷ್ಮೀ ಶಿಲ್ಪಗಳಿವೆ. ಪ್ರಸ್ತುತ ನಂದಿಕೇಶ್ವರ ಎಂದು ಕರೆಯುವ ದೇವಾಲಯವು ಮೂಲತಃದಲ್ಲಿ ವೈಷ್ಣವ ದೇವಾಲಯವಾಗಿತ್ತೋ ಎನ್ನುವಷ್ಟರ ಮಟ್ಟಿಗೆ ಸಂದೇಹಗಳಿಗೆ ಎಡೆ ಮಾಡಿಕೊಡುತ್ತದೆ.

ದೇವಾಲಯದ ಆವರಣದ ಪ್ರವೇಶದ್ವಾರದ ಗೋಡೆಯಲ್ಲಿ ದೇವಾಲಯಕ್ಕೆ ಅಭಿಮುಖವಾಗಿ ಸುಖಾಸೀನ ಭಂಗಿಯಲ್ಲಿ ಕುಳಿತಿರುವ ಸ್ತ್ರೀ, ಪುರುಷ ಕುಬ್ಜ ಶಿಲ್ಪಗಳಿವೆ. ದ್ವಿಬಾಹುವನ್ನು ಹೊಂದಿರುವ ಶಿಲ್ಪಗಳು ಪುಷ್ಟವಾದ ಮೈಕಟ್ಟು, ಉನ್ನತ ಸ್ತನಗಳು, ಕಿವಿಯಲ್ಲಿಚಕ್ರದ ಓಲೆಗಳಿದ್ದು, ದಪ್ಪಗಿನ ದುಂಡಾದದೇಹ ಮತ್ತು ಮುಖವನ್ನು ಹೊಂದಿವೆ. ಇದರಲ್ಲಿ ಪುರುಷ ಶಿಲ್ಪ ಸಾಕಷ್ಟು ತೃಟಿತಗೊಂಡಿದೆ. ಶಿಲ್ಪ ಲಕ್ಷಣಗಳನ್ನು ನೋಡಿದಾಗ ಇವು ಕ್ರಿ.ಶ. 12 ಮತ್ತು 13ನೆಯ ಶತಮಾನದ ಕಾಲಘಟ್ಟಕ್ಕೆ ಸಂಬಂಧಿಸಿದವುಗಳಾಗಿವೆ ಎಂದು ಅಭಿಪ್ರಾಯಿಸಬಹುದು. ಸ್ತ್ರೀ ಶಿಲ್ಪ ಬಲ ಕೈಯಲ್ಲಿ ಖಡ್ಗವನ್ನು, ಎಡಕೈಯಲ್ಲಿ ತ್ರಿಶೂಲವನ್ನು ಹಿಡಿದಿರುವಂತೆ ಕಂಡುಬರುತ್ತವೆ. ಇವು ಭೈರವ ಮತ್ತು ಭೈರವಿ ಶಿಲ್ಪಗಳೆಂಬುದು ತಿಳಿದುಬರುತ್ತದೆ. ಜೊತೆಗೆ ಈ ಎರಡು ಶಿಲ್ಪಗಳು ಜೈನಯಕ್ಷ ಮತ್ತುಯಕ್ಷಿಯರನ್ನು ಹೋಲುವುದರಿಂದ ಇವು ಜೈನಧರ್ಮಕ್ಕೆ ಸಂಬಂಧಿಸಿದ ಶಿಲ್ಪಗಳೆಂದು ಹೇಳಬಹುದಾದರೂ ಜಮಖಂಡಿ ನಗರದಲ್ಲಿಕ್ರಿ.ಶ. 13ನೆಯ ಶತಮಾನದ ಪೂರ್ವದಲ್ಲಿ ಜೈನಧರ್ಮದ ಕುರಿತಾಗಿ ಯಾವುದೇ ಕುರುಹುಗಳು ಕಂಡುಬರುವುದಿಲ್ಲ. ಜಮಖಂಡಿ ಪ್ರಮುಖ ಅಗ್ರಹಾರವಾಗಿತ್ತಲ್ಲದೆ ಇಲ್ಲಿ ಶೈವ ಮತ್ತು ವೈಷ್ಣವಕ್ಕೆ ಸಂಬಂಧಿಸಿದಂತೆ ಅನೇಕ ಕುರುಹುಗಳು ಇಲ್ಲಿ ಕಂಡುಬರುವುದರಿಂದ ಇವು ಭೈರವ ಮತ್ತು ಭೈರವಿ ಶಿಲ್ಪಗಳು ಎಂಬ ಅಭಿಪ್ರಾಯಕ್ಕೆ ಬರಲಾಗಿದೆ.



Full text of this paper can be downloaded online https://www.thesocialsciencedialogue.com/archive

ಇದೇ ದೇವಾಲಯದ ಆವರಣದಲ್ಲಿ ಎರಡು ತೃಟಿತಗೊಂಡ ವೀರಗಲ್ಲುಗಳು ಕಂಡುಬರುತ್ತವೆ. ಶಾಸನೋಕ್ತವಾಗಿರುವ ವೀರಗಲ್ಲು ಕಳಚುರ್ಯ ವಂಶದ ರಾಯಮುರಾರಿ ಸೋವಿದೇವನ ಕಾಲದ್ದಾಗಿದ್ದು ಕ್ರಿ.ಶ. 1175ಕ್ಕೆ ಸರಿಹೊಂದುತ್ತದೆ. ಶಾಸನ ತೃಟಿತಗೊಂಡಿರುವುದರಿಂದ ಹೆಚ್ಚಿನ ವಿಷಯಗಳು ತಿಳಿದುಬರುವುದಿಲ್ಲ. ಈ ವೀರಗಲ್ಲುವಿನಲ್ಲಿ ಎರಡು ಪಟ್ಟಿಕೆಗಳು ಮಾತ್ರ ಉಳಿದಿದ್ದು ಕೆಳ ಪಟ್ಟಿಕೆಗಳು ಒಡೆದು ಹೋಗಿವೆ. ಪ್ರಸ್ತುತ ಉಳಿದಿರುವ ಕೆಳ ಪಟ್ಟಿಕೆಯಲ್ಲಿ ಅಪ್ಸರೆಯರು ಬಂದು ವೀರನನ್ನು ತಮ್ಮ ಹೆಗಲ ಮೇಲೆ ಕೈ ಹಾಕಿಕೊಂಡು ಸ್ವರ್ಗಕೆ ಕರೆದುಕೊಂಡು ಹೋಗುತ್ತಿರುವ ಸನ್ನಿವೇಶವನ್ನು ತೋರಿಸಲಾಗಿದೆ. ಮೇಲಿನ ಪಟ್ಟಿಕೆಯಲ್ಲಿ ಮಧ್ಯ ಶಿವಲಿಂಗವಿದ್ದು ಬಲಭಾಗದಲ್ಲಿ ಶೈವ ಮುನಿ ಪೂಜೆಯಲ್ಲಿ ನಿರತನಾಗಿರುವಂತೆ, ಇವನ ಹಿಂಭಾಗದಲ್ಲಿ ನಂದಿ ಶಿಲ್ಪ, ಶಿವಲಿಂಗದ ಎಡ ಭಾಗದಲ್ಲಿ ಕೈ ಮುಗಿದು ಕುಳಿತಿರುವ ವೀರನ ಉಬ್ಬು ಶಿಲ್ಪಗಳನ್ನು ಅಲಂಕಾರಿಕವಾಗಿ ಕೆತ್ತಲಾಗಿದೆ.

ಇದೇ ದೇವಾಲಯದಲ್ಲಿರುವ ಮತ್ತೊಂದು ವೀರಗಲ್ಲು ಐದು ಪಟ್ಟಿಕೆಗಳನ್ನು ಹೊಂದಿದ್ದು ಮೇಲಿನ ಪಟ್ಟಿಕೆ ಸಂಪೂರ್ಣವಾಗಿ ಒಡೆದು ಹೋಗಿದೆ. ಉಳಿದ ಪಟ್ಟಿಕೆಗಳು ಹೆಚ್ಚು ತೃಟಿತಗೊಂಡಿರುವುದರಿಂದ ಸ್ಪಷ್ಟವಾಗಿ ಯಾವುದೇ ವಿಷಯಗಳು ತಿಳಿದುಬರುವುದಿಲ್ಲ. ಇಲ್ಲಿರುವ ನಾಲ್ಕು ಪಟ್ಟಿಕೆಗಳ ವೀರಗಲ್ಲಿನಲ್ಲಿ ಅತ್ಯಂತ ಕೆಳಗಿನ ಮತ್ತು ಮೂರನೇ ಪಟ್ಟಿಕೆಯಲ್ಲಿ ವೀರನು ಹೋರಾಡುತ್ತಿರುವಂತೆ ಚಿತ್ರಿಸಲಾಗಿದೆ. ಎರಡು ಹಾಗೂ ನಾಲ್ಕನೆಯ ಪಟ್ಟಿಕೆಯಲ್ಲಿ ವೀರಮರಣವನ್ನು ಹೊಂದಿದ ವೀರನನ್ನು ಅಪ್ಸರೆಯರು ಬಂದು ಸ್ವರ್ಗಕ್ಕೆ ಕರೆದುಕೊಂಡು ಹೋಗುವ ಉಬ್ಬು ಶಿಲ್ಪಗಳಿವೆ. ಅದೇರೀತಿ ವಿತಾನ ಭಾಗದಲ್ಲಿ ಕಂಡುಬರುವ ಪದ್ಮದ ಶಿಲಾಫಲಕವನ್ನು ದೇವಾಲಯದ ಆವರಣದಲ್ಲಿ ಅದು ಮಧ್ಯದಲ್ಲಿ ಪದ್ಮದಳವನ್ನು ಹೊಂದಿದ್ದು, ಅದರ ಸುತ್ತಲೂ ಹನ್ನೇರಡು ರಾಶಿಗಳನ್ನು ಸೂಚಿಸುವ ಸಂಕೇತಗಳಿವೆ.

**ಗ್ರಾಮ: ಜಮಖಂಡಿ** **ಹೆಸರು: ಆಂಜನೇಯದೇವಾಲಯ**

**ಸ್ಥಳ: ಊರಮಧ್ಯ** **ಅಭಿಮುಖ: ದಕ್ಷಿಣಾಭಿಮುಖ**

**ಸ್ಥಿತಿ: ಉತ್ತಮ** **ಕಾಲ: ಕಲ್ಯಾಣ ಚಾಳುಕ್ಯ**

ನಗರದ ಮಧ್ಯದಲ್ಲಿ ಕಂಡುಬರುವ ಆಂಜನೇಯ ದೇವಸ್ಥಾನ ಏಕಕೂಟ ಮಾದರಿಯದ್ದಾಗಿದ್ದು ಗರ್ಭಗೃಹ ಮತ್ತು ಸಭಾಮಂಟಪವನ್ನು ಹೊಂದಿದೆ. ದೇವಾಲಯದ ಗರ್ಭಗೃಹದಲ್ಲಿ ಅಂದಾಜು 5 ಅಡಿ ಎತ್ತರವಾದ ಆಂಜನೆಯ ಶಿಲ್ಪವಿದ್ದು ಇದು ನಂತರ ಕಾಲಾವಧಿಗೆ ಸಂಬಂಧಿಸಿದ ಶಿಲ್ಪವಾಗಿದೆ. ಆದರೆ ಗರ್ಭಗೃಹವು ಪ್ರಾಚೀನ ಕಾಲಘಟ್ಟದೆಂದು ತಿಳಿದುಬರುತ್ತದೆ. ಇದರದ್ವಾರ ಬಂಧವು ಚತುಶಾಖೆಗಳಿಂದ ಕೂಡಿದ್ದು ಅದು ವಜ್ರ, ವಲ್ಲಿ, ಸ್ತಂಭ ಮತ್ತು ಗಣಧಾರಿ ಪಟ್ಟಿಕೆಗಳನ್ನು ಹೊಂದಿದೆ. ಲಲಾಟದಲ್ಲಿ ನರಸಿಂಹನ ಉಬ್ಬು ಶಿಲ್ಪವಿದ್ದು ಮೂಲತಃ ಇದೊಂದು ವೈಷ್ಣವ ದೇವಾಲಯವಾಗಿತ್ತೆಂದು ಹೇಳಬಹುದು. ಉತ್ತರಾಂಗ ಭಾಗದಲ್ಲಿ ರೇಖಾನಾಗರ ಶೈಲಿಯಚಿಕಣಿ ಶಿಲ್ಪಗಳನ್ನು ಹೊಂದಿದೆ. ಇದರ ಮುಂಭಾಗದ ಸಭಾಮಂಟಪವನ್ನು ಜಿರ್ಣೋದ್ಧಾರಗೊಳಿಸಿದ್ದು, ಕಲ್ಯಾಣ ಚಾಳುಕ್ಯ ಶೈಲಿಯಎಂಟು ಸ್ತಂಭಗಳು ಇಲ್ಲಿವೆ ಇವು ಪೀಠ, ದಂಡ, ತಡಿ, ಫಲಕಗಳನ್ನು ಹೊಂದಿದ್ದು ಎರಡು ಚೌಕಗಳ ಮಧ್ಯ 16 ಮತ್ತು 8 ಪಟ್ಟಿಕೆಗಳ ರಚನೆಗಳಿವೆ. ಕೆಲವು ಸ್ತಂಭಗಳ ದಂಡ ಭಾಗವು ಎರಡು ಚೌಕ ಪೆಟ್ಟಿಗೆಗಳ ಮಧ್ಯ ವೃತ್ತಾಕಾರವಾಗಿವೆ. ಈ ದೇವಾಲಯ ಸ್ತಂಭಗಳು ಮತ್ತು ಗರ್ಭಗೃಹ ಮತ್ತು ಅದರ ಶಾಖೆಗಳನ್ನು


Full text of this paper can be downloaded online https://www.thesocialsciencedialogue.com/archive

ಗಮನದಲ್ಲಿಟ್ಟು ಕೊಂಡು ಅದೊಂದು ಕಲ್ಯಾಣ ಚಾಳುಕ್ಯರ ದೇವಾಲಯವೆಂದು ಹೇಳಬಹುದು. ಇನ್ನುಳಿದಂತೆ ದೇವಾಲಯ ಸಂಪೂರ್ಣವಾಗಿ ಆಧುನಿಕವಾಗಿ ಜೀರ್ಣೋದ್ಧಾರಗೊಳಿಸಲಾಗಿದೆ.

ಜಮಖಂಡಿನಗರದಲ್ಲಿ ಕಂಡುಬಂದಿರುವ ಎಲ್ಲ ದೇವಾಲಯಗಳು ದ್ರಾವಿಡ ಮಾದರಿಯ ರಚನಾ ವಿನ್ಯಾಸವನ್ನು ಹೊಂದಿವೆ. ಮತ್ತು ಮೂರ್ತಿಶಿಲ್ಪಗಳು ಸೂಕ್ಷ್ಮಕೆತ್ತನೆಗಳಿಂದ ಕೆಲವು ಸರಳ ಶೈಲಿಯಲ್ಲಿ ನಿರ್ಮಾಣವಾಗಿವೆ. ಈ ಮೇಲೆ ಚರ್ಚಿಸಲಾದ ದೇವಾಲಯಗಳು ಷಡ್ವರ್ಗಗಳನ್ನು ಹೊಂದಿದ್ದರೂ ಪ್ರಸ್ತುತದಲ್ಲಿ ದೇವಾಲಯದ ಅಧಿಷ್ಠಾನ, ಭಿತ್ತಿ ಮತ್ತು ಕಪೋತ ಭಾಗಗಳು ಮಾತ್ರ ಉಳಿದುಕೊಂಡು ಬಂದಿವೆ. ಗ್ರೀವ, ಶಿಖರ ಹಾಗೂ ಸ್ತೂಪಿಗಳು ಸಂಪೂರ್ಣವಾಗಿ ನಾಶಹೊಂದಿವೆ. ಅಲ್ಲದೇ ಪ್ರಾಚೀನ ಕಾಲಾವಧಿಯಲ್ಲಿ ಹಲವಾರು ದೇವಾಲಯಗಳು ಜಮಖಂಡಿ ಪ್ರದೇಶದಲ್ಲಿ ನಿರ್ಮಾಣವಾಗಿದ್ದರು ಸಹ ಅವುಗಳಲ್ಲಿ ಕೆಲವು ಅವಶೇಷಗಳು ಸಿಗದಷ್ಟು ನಶಿಸಿ ಹೋಗಿವೆ. ಇನ್ನೂ ಕೆಲವು ದೇವಾಲಯಗಳು ಅವನತಿಯ ಹಂತದಲ್ಲಿವೇ ಅಂತಹ ದೇವಾಲಯಗಳ ರಕ್ಷಣೆ ನಮ್ಮೆಲ್ಲರ ಮೇಲಿದೆ. ಒಟ್ಟಾರೆಯಾಗಿ ಇಲ್ಲಿಯ ದೇವಾಲಯಗಳು ಕಲೆ ಮತ್ತು ವಾಸ್ತುಶಿಲ್ಪ ಲಕ್ಷಣಗಳಲ್ಲಿ ಶ್ರೀಮಂತಿಕೆಯನ್ನು ಪಡೆದಿದ್ದು ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ, ಜವಾಬ್ದಾರಿಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸಿಕೊಂಡು ಬಂದಿವೆ ಎಂಬುದು ಅಧ್ಯಯನದಿಂದ ತಿಳಿದುಬರುತ್ತದೆ.


Full text of this paper can be downloaded online https://www.thesocialsciencedialogue.com/archive

## ಪರಾಮರ್ಶನ ಗ್ರಂಥಗಳು


ಮಂಜುನಾಥ, ಎಂ. ಜಿ. (2006). ಹೊಯ್ಸಳರ ರಾಜಲಾಂಛನ ಯಾವುದು? ಪುನರ್ ಪರಿಶೀಲನೆ, ಇತಿಹಾಸ ದರ್ಶನ, ಸಂ., 21. ಬೆಂಗಳೂರು: ಕರ್ನಾಟಕ ಇತಿಹಾಸ ಅಕಾಡೆಮಿ


## ಆಧಾರ ಗ್ರಂಥಗಳು


ಅಪರ್ಣ, ಕೂ. ಸ. (1999). *ದೇವಾಲಯ ವಾಸ್ತುಶಿಲ್ಪ ಪರಿಚಯ.* ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.

ಕಲಬುರ್ಗಿ, ಎಂ. ಎಂ. (1999). *ಪ್ರಾಚೀನಕರ್ನಾಟಕದ ಆಡಳಿತ ವಿಭಾಗಗಳು.* ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.

ಕುಲಕರ್ಣಿ, ಡಿ.ಜಿ. (2008). ಹಾವೇರಿ ಜಿಲ್ಲೆಯ ತ್ರಿಕೂಟ ದೇವಾಲಯಗಳು, ಕರ್ನಾಟಕಇತಿಹಾಸ ಸಂಶೋಧನಾ ಮಂಡಲ, ಧಾರವಾಡ.

ಕೊಪ್ಪಾ, ಎಸ್. ಕೆ. (1990). *ತರ್ದವಾಡಿ ನಾಡು ಒಂದು ಅಧ್ಯಯನ.* ಇಚಿಡಿ: ಪ್ರತಿಭಾ ಪ್ರಕಾಶನ.

ಗೋಪಾಲ, ಬಾ. ರಾ. (1980) ಕರ್ನಾಟಕದ ವಾಸ್ತುಶಿಲ್ಪ. ಮೈಸೂರು: ಮೈಸೂರು ವಿಶ್ವವಿದ್ಯಾನಿಲಯ.

ಗೋಪಾಲರಾವ್, ಎಚ್. ಎಸ್. (1993). *ಕಲ್ಯಾಣ ಚಾಲುಕ್ಯ ದೇವಾಲಯಗಳು ಒಂದು ಸಾಂಸ್ಕೃತಿಕ ಅಧ್ಯಯನ.* ಮೈಸೂರು: ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ.

ಚನ್ನಬಸಪ್ಪ, ಕೆ. (2009). *ಜಮಖಂಡಿ ಶಾಸನೋಕ್ತ ದೇವಾಲಯಗಳು.* ಧಾರವಾಡ: ಅಪ್ರಕಟಿತ ಎಂ.ಫಿಲ್. ಪ್ರಬಂಧ, ಕರ್ನಾಟಕ ವಿಶ್ವವಿದ್ಯಾಲಯ.

ಚನ್ನಬಸವಯ್ಯ ಹಿರೇಮಠ, (2014). *ಪ್ರಾಚೀನ ಕರ್ನಾಟಕದ ರಾಜಕೀಯ ವಿಭಾಗಗಳು.* ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.

ಚಿದಾನಂದಮೂರ್ತಿ, ಎಮ್. (1966). *ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ.* ಮೈಸೂರು: ಮೈಸೂರು ವಿಶ್ವವಿದ್ಯಾಲಯ.

ದೇವರಕೊಂಡಾರೆಡ್ಡಿ ಮತ್ತು ಇತರರು, (ಸಂ.)., (2006). *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ: 09, ಬಾಗಲಕೋಟೆ ಜಿಲ್ಲೆ.* ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.

ಪ್ರಭಾಕರ, ಎಂ. ಎನ್. (2011). *ದೇವಾಲಯ ವಾಸ್ತು.* ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.

ಮಟೋಳಿ, ಎಸ್. ಬಿ. (2008). ಜಮಖಂಡಿಯ ಇತಿಹಾಸ ದರ್ಪಣ. ತುಂಗಳ: ಗೆಳೆಯರ ಬಳಗ.

ಮುನಿಸ್ವಾಮಿ, ಆರ್. (ಮು.ಸಂ.), (1999). *ವಿಜಾಪುರ ಜಿಲ್ಲಾ ಗ್ಯಾಸೆಟಿಯರ್.* ಬೆಂಗಳೂರು: ಕರ್ನಾಟಕ ರಾಜ್ಯ ಗ್ಯಾಸೆಟಿಯರ್ ಇಲಾಖೆ.

ಮಂಜುನಾಥ ಎಸ್. ಪಾಟೀಲ, (2019). *ಜಮಖಂಡಿ ತಾಲೂಕಿನ ಇತಿಹಾಸ ಮತ್ತು ಪುರಾತತ್ವ.* ಬೆಂಗಳೂರು: ಚೇತನ ಬುಕ್ ಹೌಸ್.




Full text of this paper can be downloaded online https://www.thesocialsciencedialogue.com/archive



ಜಂಭುಕೇಶ್ವರ ದೇವಾಲಯ, ಜಮಖಂಡಿ



ರಾಮೇಶ್ವರ ದೇವಾಲಯ, ಜಮಖಂಡಿ



ನವರಂಗ, ಪ್ರಭುಲಿಂಗೇಶ್ವರ ದೇವಾಲಯ, ಜಮಖಂಡಿ



ನವರಂಗ, ಕಲ್ಮೇಶ್ವರ ದೇವಾಲಯ, ಜಮಖಂಡಿ